# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 295 |
| ಸದಸ್ಯರ ಹೆಸರು | ಶ್ರೀ ಎಸ್. ವ್ಹಿ .ಸಂಕನೂರ (ಪದವೀಧರರಕ್ಷೇತ್ರ) |
| ಉತ್ತರಿಸುವ ದಿನಾಂಕ | 12-07-2018 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಆರ್ಥಿಕ ಇಲಾಖೆಯು ನಂ: ಆಇ 97 ವಾತೆಸಿ, ದಿನಾಂಕ 22-04-2018 ರಂದು ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ನೌಕರರ ಸಕ್ರಮಾತಿಯ ಉಲ್ಲಂಘನೆಯ ಬಗ್ಗೆ ಬರೆದಿದೆಯೇ: (ಪ್ರತಿ ನೀಡುವುದು) | ಇಲ್ಲ |
| ಆ) | ದಿನಾಂಕ 10-04-2006ರ ಸರ್ವೋಚ್ಛ ನ್ಯಾಯಾಲಯದ ಆದೇಶ ಸಂಖ್ಯೆ: (ಸಿಎ ನಂ: 3595-3612/99) ರಲ್ಲಿ ಸಕ್ರಮಾತಿಗೆ ನಿಗದಿಪಡಿಸಿದ್ದ ಮಾನದಂಡಗಳನ್ನು ಉಲ್ಲಂಘಿಸಿ ಪ್ಯಾರಾ ನಂ: 46ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಗೆ ನಿರ್ದಿಷ್ಟವಾಗಿ ನಿಗದಿಪಡಿಸಲಾಗಿದ್ದ ಮಾನದಂಡಗಳ ವಿರುದ್ಧವಾಗಿ ಸಕ್ರಮಾತಿ ಮಾಡಿರುವುದನ್ನು ರದ್ದುಪಡಿಸಲು ಇದುವರೆಗೂ ಆರ್ಥಿಕ ಇಲಾಖೆ ಕೈಗೊಡಿರುವ ಕ್ರಮಗಳೇನು; | ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:3595-3612/1999 ಹಾಗೂ ಇತರೆ ಅಪೀಲ್‌ಗಳ ಅಡಿ ದಿನಾಂಕ: 10-04-2006 ರಂದು ನೀಡಿರುವ ಆದೇಶದನ್ವಯ ದಿನಗೂಲಿ ನೌಕರರನ್ನು ಇಲಾಖೆಯಲ್ಲಿ ಸಕ್ರಮಾತಿಗೊಳಿಸಲಾಗಿರುತ್ತದೆ. |
| ಇ) | ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು, ಇವರ ಪ್ರಕರಣ ಸಂಖ್ಯೆ: 131/2016 (ಸೇವೆ) ದಿನಾಂಕ 02-03-2018ರಂತೆ ಆಯೋಗ ಸಕ್ರಮಾತಿಯನ್ನು ರದ್ದುಪಡಿಸಲು ಹೊರಡಿಸಿರುವ ಆದೇಶದಂತೆ ವಾಣಿಜ್ಯ ತೆರಿಗೆ ಇಲಾಖೆಯು ಆರ್ಥಿಕ ಇಲಾಖೆಗೆ ಪತ್ರ ಬರೆದಿದೆಯೇ; (ಪತ್ರದ ಪ್ರತಿ ನೀಡುವುದು) | ಪತ್ರ ಬರೆದಿದೆ (ಪ್ರತಿ ಲಗತ್ತಿಸಿದೆ) |
| ಈ) | ಆಯೋಗದ ಆದೇಶದಂತೆ ಆರ್ಥಿಕ ಇಲಾಖೆಯು ಕೈಗೊಂಡಿರುವ ಕ್ರಮಗಳೇನು; | ಸರ್ಕಾರದಲ್ಲಿ ಪರಿಶೀಲನಾ ಹಂತದಲ್ಲಿದೆ. |
| ಉ) | ಸರ್ವೋಚ್ಛ ನ್ಯಾಯಾಲಯದ ಆದೇಶ ಉಲ್ಲಂಘಿಸಿ ದಿನಗೂಲಿ ನೌಕರರಿಗೆ ಹಿಂದಿನ ದಿನಾಂಕಕ್ಕೆ ಜೇಷ್ಠತೆಯನ್ನು ನಿಗದಿಪಡಿಸಿ ಸಕ್ರಮಾತಿ ಮಾಡಿರುವುದರಿಂದ ಬಡ್ತಿಯಲ್ಲಿ ನೇರ ನೇಮಕಾತಿ ನೌಕರರಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಸೇವಾ ಜ್ಯೇಷ್ಠತೆಯ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇತರೆ ವಿರುದ್ದ ಶ್ರೀಮತಿ ಉಮಾದೇವಿ ಹಾಗೂ ಇತರರು ಪ್ರಕರಣದಲ್ಲಿ ಎಸ್‌ಎಲ್‌ಪಿ (ಸಿವಿಲ್) ಸಂಖ್ಯೆ:34164/2013ರಲ್ಲಿ ದಿನಾಂಕ:25-11-2013 ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಸಕ್ರಮಾತಿಗೊಂಡ ದಿನಗೂಲಿ ನೌಕರರಿಗೆ ಅವರನ್ನು ಸಕ್ರಮಾತಿಗೊಳಿಸಿದ ದಿನಾಂಕಕ್ಕೆ ಅನುಗುಣವಾಗಿ ಸೇವಾ ಜ್ಯೇಷ್ಠತೆ ನಿಗದಿಪಡಿಸಲಾಗಿರುತ್ತದೆ. ಆದುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ. |

ಆಇ 69 ವಾತೆಇ 2018

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯ ಮಂತ್ರಿ

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ:ಸಿಬ್ಬಂದಿ-3/2ಡಿ/ಸಿಆರ್-06/2014-15

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ,
ಗಾಂಧೀನಗರ, ಬೆಂಗಳೂರು-560 009
ದಿನಾಂಕ : 31-03-2018.

ಇವರಿಗೆ :
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

**ವಿಷಯ:** ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಾಂಕ:01-7-1984 ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ನಂತರ ಶ್ರೀಮತಿ ಉಮಾದೇವಿ ಹಾಗೂ ಇತರರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸಕ್ರಮಾತಿ ಗೊಳಿಸಿರುವ ಆದೇಶವನ್ನು ಹಿಂಪಡೆಯುವ ಸಂಬಂಧ ಮಾನ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ನೀಡಿರುವ ಆದೇಶಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಕೋರುತ್ತಿರುವ ಕುರಿತು.

**ಉಲ್ಲೇಖ:**
1. ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವು ಪ್ರಕರಣ ಸಂಖ್ಯೆ 131/2016 (ಸೇವೆ) ರಡಿ ದಿನಾಂಕ: 02-03-2018 ರಂದು ನೀಡಿರುವ ಆದೇಶ.
2. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಂವಿಧಾನ ಪೀಠವು ಸಿವಿಲ್ ಅಪೀಲ್ ಸಂಖ್ಯೆ:3595-3612/1999 ಮತ್ತು ಸಿವಿಲ್ ಅಪೀಲ್ ಸಂಖ್ಯೆ: 1861-2063/2001 ಮತ್ತಿತರ ಸಿವಿಲ್ ಅಪೀಲ್‌ಗಳಲ್ಲಿ ದಿನಾಂಕ: 10-4-2006 ರಂದು ನೀಡಿರುವ ತೀರ್ಪು.
3. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 25 ಸೇ ಸ್ಥ ಅ 2003 ದಿನಾಂಕ: 25-05-2006.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 25 ಸೇ ಸ್ಥ ಅ 2003 (ಭಾ) ದಿನಾಂಕ: 13-11-2006.
5. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ:ಸಿಬ್ಬಂದಿ 2ಡಿ ಸಿಆರ್-44/2006-07 ದಿನಾಂಕ: 10-8-2006.
6. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:4702-4712/2012 ರಡಿ ದಿನಾಂಕ: 10-01-2013 ರಂದು ನೀಡಿರುವ ಆದೇಶ.
7. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 22216/2013 (ಎಸ್‌ಕೆಎಟಿ) ರಡಿ ದಿನಾಂಕ: 03-7-2013 ರಂದು ನೀಡಿರುವ ತೀರ್ಪು.
8. ಮಾನ್ಯ ಸರ್ವೋಚ್ಛ ನ್ಯಾಯಾಲಯವು ವಿಶೇಷ ಅನುಜ್ಞೆ ಅರ್ಜಿ (ಸಿವಿಲ್) ಸಂಖ್ಯೆ: 34164/2013 ರಡಿ ದಿನಾಂಕ: 25-11-2013 ರಂದು ನೀಡಿರುವ ತೀರ್ಪು.
9. ಸರ್ಕಾರದ ಪತ್ರ ಸಂಖ್ಯೆ:ಆಇ 31 ವಾತೆಸಿ 2015 ದಿನಾಂಕ:17-03-2017.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಾಂಕ:01-07-1984 ರ ನಂತರ ದಿನಗೂಲಿ ಆಧಾರದ ಮೇಲೆ ವಿವಿಧ ಆದೇಶಗಳನ್ನು ನೀಡಿ ದ್ವಿತೀಯ ದರ್ಜೆ ಸಹಾಯಕರ, ಬೆರಳಚ್ಚುಗಾರರ ಹಾಗೂ ಶೀಘ್ರಲಿಪಿಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ನೇಮಕಾತಿ ಮಾಡಲಾಗಿತ್ತು. ಈ ರೀತಿ ನೇಮಕಾತಿ ಮಾಡಿದ್ದ ನೌಕರರನ್ನು ಸಕ್ರಮಾತಿ ಮಾಡದೇ ಇದ್ದ ಪ್ರಯುಕ್ತ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿನಗೂಲಿ ನೌಕರರುಗಳಲ್ಲಿ **ಶ್ರೀಮತಿ ಉಮಾದೇವಿ** ಹಾಗೂ ಇತರರು ರಿಟ್ ಅರ್ಜಿ ಸಂಖ್ಯೆ:3190-3207/1998 ರಡಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯದ **ವಿಭಾಗೀಯ ಪೀಠವು ದಿನಾಂಕ:11-9-1998** ರಂದು ತೀರ್ಪು ನೀಡಿ ಅವರನ್ನು ದಿನಗೂಲಿ ಆಧಾರದ ಮೇಲೆ ನೇಮಕಾತಿ ಮಾಡಿದ ದಿನಾಂಕದಿಂದ ಖಾಯಂ ಸರ್ಕಾರಿ ನೌಕರರಿಗೆ ನೀಡುವ ವೇತನ ಹಾಗೂ ಇತರೆ ಭತ್ಯೆಗಳನ್ನು ನೀಡಲು ಮತ್ತು ಅದೇಶ ಸ್ವೀಕರಿಸಿದ ನಾಲ್ಕು ತಿಂಗಳ ಒಳಗಾಗಿ ಅರ್ಜಿದಾರರನ್ನು ಸಕ್ರಮಾತಿಗೊಳಿಸುವ ಸಂಬಂಧ ಪರಿಗಣಿಸಲು ಸೂಚಿಸಿ ಪ್ರಕರಣವನ್ನು ಇತ್ಯರ್ಥಪಡಿಸಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ತೀರ್ಪಿನ ಪ್ರತಿಯನ್ನು **ಅನುಬಂಧ-1** ರಂತೆ ಈ ಪತ್ರದೊಡನೆ ಅಡಕಗೊಳಿಸಿದೆ.

ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದ **ಶ್ರೀ ಹೆಚ್.ಗಣೇಶ್ ರಾವ್** ಹಾಗೂ ಇತರರು ಮಾನ್ಯ ಉಚ್ಛ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂಖ್ಯೆ 24976-25022/1999 ರಡಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯದ ಏಕಸದಸ್ಯ ಪೀಠವು ದಿನಾಂಕ:29-7-1999 ರಂದು ಅಂತಿಮ ತೀರ್ಪನ್ನು ನೀಡಿರುತ್ತದೆ. ಸದರಿ ತೀರ್ಪಿನ ಅನುಸಾರ ಹತ್ತು ವರ್ಷಗಳ ಸೇವೆ ಪೂರೈಸಿದ ಅರ್ಜಿದಾರರನ್ನು ದಿನಾಂಕ:06-8-1990 ರ ಸರ್ಕಾರದ ಆದೇಶದಲ್ಲಿರುವ ಅಂಶಗಳನ್ನು ಆಧರಿಸಿ ಅವರುಗಳನ್ನು ಸಕ್ರಮಾತಿಗೊಳಿಸಲು ಹಾಗೂ ವೇತನ ಶ್ರೇಣಿಯ ಕನಿಷ್ಠ ವೇತನ ಹಾಗೂ ಇತರೆ ಭತ್ಯೆಗಳನ್ನು (ಸಮಾನಾಂತರ ನಿಯತ ಹುದ್ದೆಗಳಿಗೆ ಅನ್ವಯವಾಗುವ ಆರಂಭಿಕ ವೇತನದ ಕನಿಷ್ಠ ವೇತನ ಹಾಗೂ ಇತರೆ ಭತ್ಯೆಗಳನ್ನು) ಅವರು ಸಕ್ರಮಾತಿ ಹೊಂದಿದ ದಿನಾಂಕದಿಂದ ನೀಡಲು ಆದೇಶಿಸುತ್ತಾ, ಎರಡೂ ಸೌಲಭ್ಯಗಳನ್ನು **ದಿನಾಂಕ:11-9-1998** ರಿಂದ ಅನ್ವಯವಾಗುವಂತೆ ನೀಡಲು ಸೂಚಿಸಿರುತ್ತದೆ. ತತ್ಸಂಬಂಧ ಅನುವರ್ತನೆಯನ್ನು ಆದೇಶದ ಪ್ರತಿ ಸ್ವೀಕರಿಸಿದ ಆರು ತಿಂಗಳ ಒಳಗಾಗಿ ಸಲ್ಲಿಸಲು ಸೂಚಿಸಿರುತ್ತದೆ. ಶ್ರೀಮತಿ ಉಮಾದೇವಿ ಪ್ರಕರಣದಲ್ಲಿರುವ ಅರ್ಜಿದಾರರಿಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಪಿನನ್ವಯ ನಿಯತ ವೇತನವನ್ನು ಯಾವುದಾದರೂ ಪೂರ್ವಾನ್ವಯ ದಿನಾಂಕಕ್ಕನುಗುಣವಾಗಿ ಲಭ್ಯವಾದಲ್ಲಿ ಅಂತಹ ಪರಿಹಾರ ಪಡೆಯಲು ನೌಕರರು ಅರ್ಹರಾಗಿರುತ್ತಾರೆ ಎಂಬುದಾಗಿಯೂ ಸಹ ಉಚ್ಛ ನ್ಯಾಯಾಲಯದ ಏಕಸದಸ್ಯಪೀಠವು ತಿಳಿಸಿರುತ್ತದೆ. ಮಾನ್ಯ ಏಕಸದಸ್ಯಪೀಠದ ತೀರ್ಪಿನ ಪ್ರತಿಯನ್ನು **ಅನುಬಂಧ-2** ರಂತೆ ಲಗತ್ತಿಸಿ ಸಲ್ಲಿಸಿದೆ.

ಮೇಲಿನಂತೆ ಮಾನ್ಯ ಏಕಸದಸ್ಯಪೀಠವು ನೀಡಿದ ತೀರ್ಪನ್ನು ಸರ್ಕಾರವು ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ರಿಟ್ ಅಪೀಲ್ ಸಂಖ್ಯೆ: 1592-1638/2000 ಹಾಗೂ ಇತರೆ ಅರ್ಜಿಗಳಡಿ ಪ್ರಶ್ನಿಸಿದ್ದು, ಈ ರೀತಿ ಪ್ರಶ್ನಿಸಿದ್ದಕ್ಕೆ ಸಂಬಂಧಿಸಿದಂತೆ, ದಿನಗೂಲಿ ನೌಕರರು ಮಂಜೂರಾದ ಹುದ್ದೆಗಳಲ್ಲಿ ಲಭ್ಯವಿರುವ ರಿಕ್ತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಶಗಳನ್ನು ಮನಗಂಡು, ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ಮಾನ್ಯ ಉಚ್ಛ ನ್ಯಾಯಾಲಯದ ಏಕಸದಸ್ಯ ಪೀಠವು ನೀಡಿದ ಆದೇಶವನ್ನು ಎತ್ತಿ ಹಿಡಿದು ಸರ್ಕಾರವು ಸಲ್ಲಿಸಿದ್ದ ರಿಟ್ ಅಪೀಲನ್ನು ವಜಾಗೊಳಿಸಿ ದಿನಾಂಕ: 01-06-2001 ರಂದು ತೀರ್ಪು ನೀಡಿರುತ್ತದೆ.

ಈ ರೀತಿ ನೀಡಿರುವ ತೀರ್ಪಿನಲ್ಲಿ ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ಹಲವಾರು ತೀರ್ಪುಗಳನ್ನು ಉಲ್ಲೇಖಿಸಿ ಅದರಲ್ಲಿ ಪ್ರಮುಖವಾಗಿ ಸ್ಟೇಟ್ ಆಫ್ ಹರಿಯಾಣ ವಿರುದ್ಧ ಜಸ್ಮೀರ್ ಸಿಂಗ್ (1997(1) ಸುಪ್ರೀಂ 137) ಮತ್ತು ಗಾಜಿಯಾಬಾದ್ ಡೆವಲಪ್‌ಮೆಂಟ್ ಅಥಾರಿಟಿ ವಿರುದ್ಧ ವಿಕ್ರಂ ಚೌಧರಿ (1995 (5) ಎಸ್‌ಸಿಸಿ 210) ಗಳ ತೀರ್ಪುಗಳಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ಅಂಶಗಳನ್ನು ವಿಶ್ಲೇಷಿಸಿ, ಸದರಿ ತೀರ್ಪುಗಳಲ್ಲಿ ಒಳಪಟ್ಟಿದ್ದ ಅರ್ಜಿದಾರರು ನೇಮಕಾತಿಗೆ ನಿಯತ ಮಂಜೂರಾದ ಹುದ್ದೆಗಳ ಲಭ್ಯವಿಲ್ಲದೇ ಇದ್ದ ಪ್ರಯುಕ್ತ ಅಂತಹವರಿಗೆ

ನಿಯತ ನೌಕರರಿಗೆ ಲಭ್ಯವಾಗುವ ವೇತನವನ್ನು ನೀಡಲು ಸಾಧ್ಯವಿರುವುದಿಲ್ಲ ಎಂಬುದಾಗಿ ತೀರ್ಮ ನೀಡಿರುವುದನ್ನು ಮಾನ್ಯ ವಿಭಾಗೀಯ ಪೀಠವು ಉಲ್ಲೇಖಿಸಿರುತ್ತದೆ. ಆದರೆ, ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರು ಮಂಜೂರಾದ ಹುದ್ದೆಗಳಲ್ಲಿ ಉಳಿದಿರುವ ರಿಕ್ತಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ ಎಂದು ಅಭಿಪ್ರಾಯಪಡುತ್ತಾ ಸ್ಟೇಟ್ ಆಫ್ ಹರಿಯಾಣಾ ವಿರುದ್ಧ ಜಸ್ಮೀರ್ ಸಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿರುವ ತೀರ್ಪಿನಲ್ಲಿ ಅಗತ್ಯ ವಿದ್ಯಾರ್ಹತೆಯ ಕೊರತೆ ಪ್ರಸ್ತುತ ಪ್ರಕರಣದಲ್ಲಿ ಕಂಡುಬಂದಿರುವುದಿಲ್ಲ ಎಂಬ ಅಂಶವನ್ನು ಪ್ರತಿಪಾದಿಸುತ್ತಾ ಸದರಿ ಪ್ರಕರಣಗಳಲ್ಲಿ ನೀಡಿರುವ ತೀರ್ಮಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದು ತಿಳಿಸುತ್ತಾ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಉನ್ನತ ಪೀಠವು ನೀಡಿರುವ ತೀರ್ಮಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ ಎಂದೂ ಸಹ ಅಭಿಪ್ರಾಯಪಟ್ಟಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ದಿನಾಂಕ:01-6-2001 ರಂದು ನೀಡಿರುವ ತೀರ್ಪಿನ ಪ್ರತಿಯನ್ನು ಅನುಬಂಧ-3 ರಂತೆ ಲಗತ್ತಿಸಿ ಸಲ್ಲಿಸಲಾಗಿದೆ.

ಮುಂದುವರೆದಂತೆ, ಶ್ರೀಮತಿ ಹೇಮಲತಾ ಮತ್ತು ಇತರ ದಿನಗೂಲಿ ನೌಕರರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 25676-25769/1999 ರಡಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ: 29-07-1999 ರಂದು ಅಂತಿಮ ತೀರ್ಪನ್ನು ನೀಡಿರುತ್ತದೆ. ಸದರಿ ತೀರ್ಪಿನ ಅನುಸಾರ ಹತ್ತು ವರ್ಷಗಳ ಸೇವೆ ಪೂರೈಸಿದ ಅರ್ಜಿದಾರರನ್ನು ದಿನಾಂಕ:06-8-1990 ರ ಸರ್ಕಾರದ ಆದೇಶದಲ್ಲಿರುವ ಅಂಶಗಳನ್ನು ಆಧರಿಸಿ ಅವರುಗಳನ್ನು ಸಕ್ರಮಾತಿಗೊಳಿಸಲು ಹಾಗೂ (ಸಮಾನಾಂತರ ನಿಯತ ಹುದ್ದೆಗಳಿಗೆ ಅನ್ವಯವಾಗುವ ಆರಂಭಿಕ ವೇತನದ ಕನಿಷ್ಠ ವೇತನ ಹಾಗೂ ಇತರೆ ಭತ್ಯೆಗಳನ್ನು) ಆ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಶ್ರೇಣಿಯ ಕನಿಷ್ಠ ವೇತನ ಹಾಗೂ ಇತರೆ ಭತ್ಯೆಗಳನ್ನು ಅವರು ಸಕ್ರಮಾತಿ ಹೊಂದಿದ ದಿನಾಂಕದಿಂದ ನೀಡಲು ಆದೇಶಿಸುತ್ತಾ, ಎರಡೂ ಸೌಲಭ್ಯಗಳನ್ನು ದಿನಾಂಕ:11-9-1998 ರಿಂದ ಅನ್ವಯವಾಗುವಂತೆ ನೀಡಲು ಸೂಚಿಸಿರುತ್ತದೆ. ತತ್ಸಂಬಂಧ ಅನುವರ್ತನೆಯನ್ನು ಆದೇಶದ ಪ್ರತಿ ಸ್ವೀಕರಿಸಿದ ಆರು ತಿಂಗಳ ಒಳಗಾಗಿ ಸಲ್ಲಿಸಲು ಸೂಚಿಸಿರುತ್ತದೆ. ಶ್ರೀಮತಿ ಉಮಾದೇವಿ ಪ್ರಕರಣದಲ್ಲಿರುವ ಅರ್ಜಿದಾರರಿಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಪಿನನ್ವಯ ನಿಯತ ವೇತನವನ್ನು ಯಾವುದಾದರೂ ಪೂರ್ವಾನ್ವಯ ದಿನಾಂಕಕ್ಕನುಗುಣವಾಗಿ ಲಭ್ಯವಾದಲ್ಲಿ ಅಂತಹ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ ಎಂಬುದಾಗಿಯೂ ಸಹ ಉಚ್ಛ ನ್ಯಾಯಾಲಯದ ಏಕಸದಸ್ಯಪೀಠವು ತಿಳಿಸಿರುತ್ತದೆ. ಮಾನ್ಯ ಏಕಸದಸ್ಯಪೀಠದ ತೀರ್ಪಿನ ಪ್ರತಿಯನ್ನು ಅನುಬಂಧ-4 ರಂತೆ ಲಗತ್ತಿಸಿ ಸಲ್ಲಿಸಿದೆ.

ದಿನಾಂಕ:29-7-1999 ರಂದು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಶ್ರೀ ಗಣೇಶ್ ರಾವ್ ಹಾಗೂ ಇತರರ ಪ್ರಕರಣದಲ್ಲಿ ನೀಡಿರುವ ತೀರ್ಪಿನ ವಿರುದ್ಧ ಸರ್ಕಾರವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ವಿಶೇಷ ಅನುಜ್ಞೆ ಅರ್ಜಿ ಸಂಖ್ಯೆ 18879 – 19072/2001 ಸಲ್ಲಿಸುವ ಮೂಲಕ ಪ್ರಶ್ನಿಸಿರುತ್ತದೆ.

ಅದೇ ರೀತಿ ಶ್ರೀಮತಿ ಉಮಾದೇವಿ ಹಾಗೂ ಇತರರ ಪ್ರಕಣದಲ್ಲಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಪನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ವಿಶೇಷ ಅನುಜ್ಞೆ ಅರ್ಜಿ ಸಂಖ್ಯೆ 1684-1701/99 ರಡಿ ಸರ್ಕಾರವು ಪ್ರಶ್ನಿಸಿದ್ದು ಈ ರೀತಿ ಪ್ರಶ್ನಿಸಿದ್ದಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಈ ಕೆಳಕಂಡಂತೆ ಮಧ್ಯಂತರ ತಡೆಯಾಜ್ಞೆ ನೀಡಿರುತ್ತದೆ.

" In the meantime, there will be stay of implementation of the judgment for the period prior to the date of judgement of the High Court. The respondents will get the salary as per the High Court judgement from the date of judgment. "

ಮೇಲ್ಕಂಡಂತೆ ನೀಡಿರುವ ನಿರ್ದೇಶನದಲ್ಲಿ ದಿನಗೂಲಿ ನೌಕರರನ್ನು ಸಕ್ರಮಾತಿಗೊಳಿಸುವ ಬಗ್ಗೆ ಯಾವುದೇ ತಡೆಯಾಜ್ಞೆ ಇರುವುದಿಲ್ಲ. ಉಳಿದಂತೆ, ವೇತನ ಪಾವತಿಗೆ ಸಂಬಂಧಿಸಿದಂತೆ ನೀಡಿರುವ ನಿರ್ದೇಶನವು ದಿನಾಂಕ:11-9-1998 ರ ಪೂರ್ವದ ಅವಧಿಗೆ ಮಾತ್ರ ಸಂಬಂಧಿಸಿದ್ದಾಗಿರುತ್ತದೆ ಎಂದು ಇಲಾಖೆಯು ಅಭಿಪ್ರಾಯಪಟ್ಟಿರುವ ಬಗ್ಗೆ ಇಲಾಖಾ ಕಡತಗಳಲ್ಲಿ ಉಲ್ಲೇಖವಿರುತ್ತದೆ.

ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಿನಗೂಲಿ ನೌಕರರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾದ ಅರ್ಜಿಗಳಲ್ಲಿ ಪ್ರಮುಖವಾಗಿ ಶ್ರೀಮತಿ ಉಮಾದೇವಿ ಮತ್ತಿತರರು ರಿಟ್ ಅರ್ಜಿ ಸಂಖ್ಯೆ 3190-3207/1998 ಆದೇಶದ ದಿನಾಂಕ:11-9-1998 ಹಾಗೂ ಶ್ರೀ ಹೆಚ್.ಗಣೇಶ್ ರಾವ್ ಮತ್ತು ಇತರರು ರಿಟ್ ಅರ್ಜಿ ಸಂಖ್ಯೆ 24976-25022/2009 ಆದೇಶ ದಿನಾಂಕ:29-7-1999, ಶ್ರೀಮತಿ ಹೇಮಲತಾ ಮತ್ತು ಇತರರು ಪ್ರಕರಣ ಅರ್ಜಿ ಸಂಖ್ಯೆ 25676-25769/99 ಆದೇಶದ ದಿನಾಂಕ 29-7-1999, ಶಿವಪುತ್ರಪ್ಪ ಮತ್ತು ಇತರರು ಅರ್ಜಿ ಸಂಖ್ಯೆ 27167-27184 ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಸಲ್ಲಿಸಲಾಗಿರುವ ವಿಶೇಷ ಮೇಲ್ಮನವಿಗಳು, ಇವೆಲ್ಲವುಗಳನ್ನೂ ಪರಿಗಣಿಸಿ ಸರ್ಕಾರವು ತನ್ನ ಆದೇಶ ಸಂಖ್ಯೆ : **ಆಇ 201 ವಾತಸೆ 2000 ದಿನಾಂಕ:27-6-2001** ರಲ್ಲಿ ದಿನಾಂಕ:01-7-1984 ರ ನಂತರ ಮಂಜೂರಾದ ಹುದ್ದೆಗಳಲ್ಲಿಯ ರಿಕ್ತ ಸ್ಥಾನಗಳಲ್ಲಿ ನೇಮಕಗೊಂಡು ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕರು ಹಾಗೂ ಬೆರಳಚ್ಚುಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ವಿಶೇಷ ಅನುಮತಿ ಅರ್ಜಿ ಸಂಖ್ಯೆ 1684 ರಿಂದ 1701/99 ರ ಮಧ್ಯಂತರ ಆದೇಶದ ದಿನಾಂಕ:12-5-1999 ರಲ್ಲಿ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವುದಕ್ಕೆ ನೀಡಲಾದ ತಡೆಯಾಜ್ಞೆ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯ ಪುನರ್ವಿಮರ್ಶನ ಅರ್ಜಿಯಲ್ಲಿ ನೀಡಬಹುದಾದ ಅಂತಿಮ ತೀರ್ಪಿಗೆ ಒಳಪಟ್ಟು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ **ಆದೇಶ ದಿನಾಂಕ:11-9-1998** ರಿಂದ ಜಾರಿಗೆ ಬರುವಂತೆ ಖಾಯಂ ಸರ್ಕಾರಿ ನೌಕರರಿಗೆ ದೊರೆಯುವ ವೇತನ ಶ್ರೇಣಿಯ ಕನಿಷ್ಠ ವೇತನ ಮತ್ತು ಇತರೆ ಭತ್ಯೆಗಳನ್ನು ಮಂಜೂರು ಮಾಡಿದೆ. ಈ ರೀತಿ ಮಂಜೂರು ಮಾಡಿರುವ ಆದೇಶದ ಪ್ರತಿಯನ್ನು ಅನುಬಂಧ-5 ರಂತೆ ಲಗತ್ತಿಸಿ ಸಲ್ಲಿಸಿದೆ.

ದಿನಾಂಕ:01-7-1984 ರ ನಂತರ ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಹಾಗೂ ಶೀಘ್ರಲಿಪಿಗಾರರ ಹುದ್ದೆಗಳಿಗೆ ದಿನಗೂಲಿ ಆಧಾರದ ಮೇಲೆ ನೌಕರರನ್ನು ನೇಮಕ ಮಾಡಲಾಗಿದ್ದು ಅಂತಹ ದಿನಗೂಲಿ ನೌಕರರನ್ನು ಸೇವೆಯಲ್ಲಿ ಸಕ್ರಮಗೊಳಿಸುವ ಬಗ್ಗೆ ರಾಜ್ಯದ ಮಾನ್ಯ ಉಚ್ಛ ನ್ಯಾಯಾಲಯವು ಉಮಾದೇವಿ ಹಾಗೂ ಇತರರ ಪ್ರಕರಣದಲ್ಲಿ ದಿನಾಂಕ:11-9-1998 ರಲ್ಲಿ ನೀಡಿದ್ದ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ತನ್ನ ದಿನಾಂಕ:10-4-2006 ರಲ್ಲಿ ಅಂತಿಮ ತೀರ್ಪನ್ನು ನೀಡಿರುತ್ತದೆ.

ರಾಜ್ಯ ಸರ್ಕಾರವು ದಿನಾಂಕ:01-7-1984 ರ ನಂತರ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಸಕ್ರಮಗೊಳಿಸುವ ಬಗ್ಗೆ ಸಿವಿಲ್ ಅಪೀಲ್ ಸಂಖ್ಯೆ 3595-3612/99 ಮತ್ತು ಸಿವಿಲ್ ಅಪೀಲ್ ಸಂಖ್ಯೆ 1861-2063/2001 ಹಾಗೂ ಮತ್ತಿತರ ಸಿವಿಲ್ ಅಪೀಲುಗಳಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಂವಿಧಾನ ಪೀಠವು ದಿನಾಂಕ:10-4-2006 ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ:25-6-2006 ರಂದು ಸರ್ಕಾರವು ಸುತ್ತೋಲೆಯನ್ನು ಹೊರಡಿಸಿ ದಿನಗೂಲಿ ಆಧಾರದ ಮೇಲೆ ನೇಮಕಗೊಂಡಿರುವ ನೌಕರರನ್ನು ಸಕ್ರಮಗೊಳಿಸುವ ಬಗ್ಗೆ ಅನುಸರಿಸಬೇಕಾದ ಕ್ರಮಗಳ ಕುರಿತು ಸ್ಪಷ್ಟೀಕರಿಸಿರುತ್ತದೆ.

ಮೇಲ್ಕಂಡಂತೆ ನೀಡಿರುವ ಸುತ್ತೋಲೆಯನುಸಾರ ಈ ಕೆಳಕಂಡಂತೆ ಷರತ್ತುಗಳನ್ನು ಪೂರೈಸಿರುವ ನೌಕರರನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ:10-4-2006 ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಸಕ್ರಮಾತಿಗೊಳಸಬೇಕಾಗಿರುತ್ತದೆ.

<u>ಷರತ್ತುಗಳು</u>

1. ಅವರು ಮೂಲತಃ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.
2. ಅವರು ಮಂಜೂರಾದ ಹುದ್ದೆಗಳಲ್ಲಿಯ ರಿಕ್ತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರಬೇಕು.
3. ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಯಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಿರಬೇಕು.
4. ಈ ರೀತಿ ಕಾರ್ಯನಿರ್ವಹಿಸುತ್ತಿರುವವರು ಯಾವುದೇ ನ್ಯಾಯಾಲಯಗಳ ಅಥವಾ ನ್ಯಾಯಮಂಡಳಿಗಳ ಆದೇಶಗಳನ್ವಯ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿರಬಾರದು.

ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನೌಕರರೂ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ಮೇಲ್ಕಂಡ ಷರತ್ತುಗಳನ್ನು ಪೂರೈಸಿರುತ್ತಾರೆ ಎಂದು ಈ ಕಛೇರಿಯ ದಿನಾಂಕ:10-8-2006 ರ ಅಧಿಕೃತ ಜ್ಞಾಪನಗಳನ್ವಯ ಸಕ್ರಮಾತಿಗೊಳಸಲಾಗಿರುತ್ತದೆ. ಈ ರೀತಿ ಸಕ್ರಮಾತಿಗೊಳಸಿದ ತರುವಾಯ ಕಣ್ತಪ್ಪಿನಿಂದ ಉಂಟಾದ ಕೆಲವು ದೋಷಗಳನ್ನು ಪರಿಹರಿಸುವ ನಿಟ್ಟಿನಲ್ಲಿ ದಿನಾಂಕ:06-01-2007 ರ ಪರಿಷ್ಕೃತ ಆದೇಶಗಳಲ್ಲಿ ಕಾಣಿಸಿರುವಂತೆ ಈ ಕೆಳಕಂಡಂತೆ ವಿವಿಧ ವೃಂದಗಳಲ್ಲಿ ಸಕ್ರಮಾತಿಗೊಳಸಲಾಗಿರುತ್ತದೆ.

| | |
|---|---|
| ದ್ವಿತೀಯ ದರ್ಜೆ ಸಹಾಯಕರು | 189 |
| ಶೀಘ್ರಲಿಪಿಗಾರರು | 17 |
| ಬೆರಳಚ್ಚುಗಾರರು | 147 |

ದಿನಾಂಕ:10-8-2006 ರ ಅಧಿಕೃತ ಜ್ಞಾಪನ ಹಾಗೂ ದಿನಾಂಕ:06-01-2007 ರ ಪರಿಷ್ಕೃತ ಆದೇಶಗಳ ಪ್ರತಿಯನ್ನು **ಅನುಬಂಧ-6** ರಂತೆ ಸಲ್ಲಿಸಿದೆ.

ಸರ್ಕಾರವು ದಿನಾಂಕ:13-11-2006 ರಂದು ಸುತ್ತೋಲೆ ಹೊರಡಿಸಿ ಸದರಿ ಸುತ್ತೋಲೆಯಲ್ಲಿ ದಿನಾಂಕ:10-4-2006 ರ ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಈ ಕೆಳಕಂಡ ನಾಲ್ಕು ಷರತ್ತುಗಳನ್ನು ಪೂರೈಸಿದ ದಿನಗೂಲಿ ನೌಕರರನ್ನು ಮಾತ್ರ ಸಕ್ರಮಾತಿಗೊಳಸಬಹುದೆಂದು ಸೂಚಿಸಿರುತ್ತದೆ.

**ಷರತ್ತುಗಳು:**

1. ಅಂತಹ ನೌಕರರನ್ನು ಮೂಲತಃ ಮಂಜೂರಾದ ಖಾಲಿ ಹುದ್ದೆಯಲ್ಲಿ ನೇಮಕಮಾಡಿರಬೇಕು.
2. ಹೀಗೆ ಅವರನ್ನು ನೇಮಕ ಮಾಡುವಾಗ ಅವರು ಸಂಬಂಧಿತ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.
3. ಹೀಗೆ ನೇಮಕಗೊಂಡಂತಹ ನೌಕರರು ಹತ್ತು ವರ್ಷಗಳಗೂ ಹೆಚ್ಚಿನ ಅವಧಿಗೆ ಸತತವಾಗಿ ಅದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರಬೇಕು.
4. ನ್ಯಾಯಾಲಯಗಳ ಅಥವಾ ನ್ಯಾಯಮಂಡಳಗಳ ಆದೇಶಕ್ಕೊಳಪಟ್ಟು ಹತ್ತು ವರ್ಷಗಳಗೂ ಹೆಚ್ಚಿನ ಅವಧಿಗೆ ಅವರನ್ನು ಮುಂದುವರೆಸಿರಬಾರದು.

ಮೇಲ್ಕಂಡ ನಾಲ್ಕು ಷರತ್ತುಗಳಲ್ಲಿ ನಾಲ್ಕನೇ ಷರತ್ತಾದ ಹತ್ತು ವರ್ಷಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿಗೆ ನೌಕರರನ್ನು ಮುಂದುವರೆಸಿರುವುದು ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣದ ಆದೇಶದಿಂದ ಆಗಿರಬಾರದು ಎಂಬುದಾಗಿ ತಿಳಸುತ್ತಾ, ದಿನಗೂಲಿ ನೌಕರರುಗಳನ್ನು ಮುಂದುವರೆಸಲು ದಿನಾಂಕ:11-4-1990 ಮತ್ತು ದಿನಾಂಕ:23-4-1993 ರಂದು ಉಚ್ಛ ನ್ಯಾಯಾಲಯವು ನೀಡಿರುವ ಆದೇಶಗಳು ಕಾರಣವಾಗಿವೆ. ಈ ಆದೇಶಗಳಂದಾಗಿ ದಿನಾಂಕ:01-7-1984 ರ ನಂತರ ನೇಮಕಗೊಂಡ ದಿನಗೂಲಿ ನೌಕರರನ್ನು ಸೇವೆಯಲ್ಲಿ ಮುಂದುವರೆಸಲಾಗಿದೆ. ಆದುದರಿಂದ ರಾಜ್ಯದಲ್ಲಿರುವ ಬಹುಪಾಲು ದಿನಗೂಲಿ ನೌಕರರು ನ್ಯಾಯಾಲಯದ ಈ ಆದೇಶಗಳಂದ ಮುಂದುವರೆದಿರುವುದರಿಂದ ಅವರು ಸುಪ್ರೀಂ ಕೋರ್ಟ್ ನಿಗದಿಪಡಿಸಿದ ನಾಲ್ಕನೇ ಷರತ್ತನ್ನು ಪೂರೈಸಿದಂತಾಗುವುದಿಲ್ಲ. ಹೀಗಾಗಿ ಅವರು ಸಕ್ರಮಾತಿಗೆ ಅರ್ಹರಾಗಿರುವುದಿಲ್ಲ ಎಂದು ಸದರಿ ಸುತ್ತೋಲೆಯಲ್ಲಿ ಸೂಚಿಸುತ್ತಾ ದಿನಾಂಕ:10-4-2006 ರ ನಂತರ ಯಾವುದಾದರೂ ಇಲಾಖೆಯು ದಿನಗೂಲಿ ನೌಕರರನ್ನು ಸಕ್ರಮಗೊಳಸಿದ್ದಲ್ಲಿ ಅಂತಹ ಪ್ರಕರಣಗಳನ್ನು ಮೇಲ್ಕಂಡ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸಿ ಅಂತಹ ಪ್ರಕರಣಗಳು ಸುಪ್ರೀಂ ಕೋರ್ಟಿನ ತೀರ್ಪಿಗೆ ಅನುಗುಣವಾಗಿಲ್ಲದಿದ್ದಲ್ಲಿ ಅವುಗಳನ್ನು ಹಿಂಪಡೆಯಲು ಕ್ರಮ ಕೈಗೊಳ್ಳಬೇಕೆಂದೂ ಸಹ ಸೂಚಿಸಲಾಗಿರುತ್ತದೆ.

ಮುಂದುವರೆದಂತೆ, ಸರ್ಕಾರವು ತನ್ನ ಪತ್ರ ಸಂಖ್ಯೆ:ಆಇ 97 ವಾತೆಸಿ 2008 ದಿನಾಂಕ:22-4-2008 ರಲ್ಲಿ ಸರ್ಕಾರಿ ಸುತ್ತೋಲೆ ಸಂಖ್ಯೆ :ಸಿಆಸುಇ 25 ಸೇಸ್ಥಆ 2003 (ಭಾ) ದಿನಾಂಕ:13-11-2006 ರ ಕಂಡಿಕೆ (4) ರಲ್ಲಿ ನಮೂದಿಸಿರುವಂತೆ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಹೊರಡಿಸಿರುವ ಆದೇಶಗಳನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ:10-4-2006 ರ ತೀರ್ಪಿನ ಅಡಿಯಲ್ಲಿ ಪರಿಶೀಲಿಸಿ ಅವುಗಳನ್ನು ಹಿಂಪಡೆಯಲು ನಿಯಮಾನುಸಾರ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಿರುತ್ತದೆ.

ಸರ್ಕಾರವು ಬರೆದ ಪತ್ರಕ್ಕನುಗುಣವಾಗಿ ಇಲಾಖೆಯು ದಿನಾಂಕ:26-12-2008 ರಲ್ಲಿ ಸವಿಸ್ತಾರವಾದ ಪತ್ರವನ್ನು ಬರೆದಿರುತ್ತದೆ. ಸದರಿ ಪತ್ರದಲ್ಲಿ ಇಲಾಖೆಯಲ್ಲಿ ಸಕ್ರಮಾತಿಗೊಳಿಸಿರುವ ದಿನಗೂಲಿ ನೌಕರರು ಸರ್ಕಾರವು ದಿನಾಂಕ:13-11-2006 ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ವಿಧಿಸಿರುವ ನಾಲ್ಕು ಷರತ್ತುಗಳನ್ನು ಪೂರೈಸಿರುವುದಾಗಿ ತಿಳಿಸುತ್ತಾ ಸಕ್ರಮಾತಿ ಆದೇಶವನ್ನು ವಾಪಾಸು ಪಡೆಯುವ ಸಂಭವ ಉದ್ಭವವಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿರುತ್ತದೆ.

ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ವೃಂದದ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ:10-09-2009 ರಂದು ಪ್ರಕಟಿಸಿದ್ದು ಸದರಿ ಜ್ಯೇಷ್ಠತಾ ಪಟ್ಟಿಯಲ್ಲಿ ಸಕ್ರಮಾತಿ ಹೊಂದಿದ ದಿನಗೂಲಿ ನೌಕರರ ಸೇವಾ ಜ್ಯೇಷ್ಠತೆಗೆ ಸಂಬಂಧಿಸಿದಂತೆ ಸರ್ಕಾರ ಸ್ಪಷ್ಟೀಕರಣ ನೀಡಿದ ನಂತರ ಅರ್ಹತಾ ದಿನಾಂಕ ನಿಗದಿಪಡಿಸಲಾಗುತ್ತದೆ ಎಂಬ ಷರತ್ತನ್ನು ವಿಧಿಸಿ ಸೇವಾ ಜ್ಯೇಷ್ಠತೆಯನ್ನ ಜ್ಯೇಷ್ಠತಾ ಪಟ್ಟಿಯ ಕಡೆಯಲ್ಲಿ ಸಕ್ರಮಾತಿ ಹೊಂದಿದ ನೌಕರರ ಹೆಸರುಗಳನ್ನು ಸೇರ್ಪಡೆ ಮಾಡಿದ್ದನ್ನು ಶ್ರೀಮತಿ ಉಮಾದೇವಿ ಹಾಗೂ ಇತರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮುಂದೆ ಅರ್ಜಿ ಸಂಖ್ಯೆ 4702-4712/2012 ಸಲ್ಲಿಸುವುದರ ಮೂಲಕ ಪ್ರಶ್ನಿಸಿರುತ್ತಾರೆ. ಈ ರೀತಿ ಪ್ರಶ್ನಿಸಿದ್ದಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ:10-01-2013 ರಲ್ಲಿ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

"4. ..... The fact that services of these applicants had been regularised in existing posts, it was not proper on the part of the Commissioner for Commercial Taxes, to have given them seniority only from the date of order of regularisation. The applicants are entitled for seniority from the date of regularisation of their services.

6......The applications are allowed. The respondents are directed to count the seniority of the applicants from the dates of their regularisation, that is from 1994/1995 mentioned before respective names in the Official Memorandum No.Sibbandi.2D.CR-44/2006-07 dated 10.8.2006 (Annexure A-2) and re-fix their seniority accordingly in the cadre of Second Division Assistants. Thereafter, the in-charge arrangements made as per Annexure A-14 be reviewed and further benefits shall be considered for the applicants."

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶವನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸರ್ಕಾರವು ರಿಟ್ ಅರ್ಜಿ ಸಂಖ್ಯೆ 22216/2013 ರಡಿ ಪ್ರಶ್ನಿಸಲಾಗಿರುತ್ತದೆ. ಈ ರೀತಿ ಪ್ರಶ್ನಿಸಿದ್ದ ಸಂದರ್ಭದಲ್ಲಿ ಪ್ರಮುಖವಾಗಿ ಸಕ್ರಮಗೊಂಡ ದಿನಗೂಲಿ ನೌಕರರು ಸಕ್ರಮಗೊಳ್ಳುವ ಪೂರ್ವದಲ್ಲಿ ದಿನಗೂಲಿ ಸೇವೆಯಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 8192/90 ಮತ್ತು 12610/93 ರಡಿ ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ವಯ ಸೇವೆಯಲ್ಲಿ ಮುಂದುವರೆದಿರುತ್ತಾರೆ ಎಂದು ಸರ್ಕಾರವು ದಿನಾಂಕ:13-11-2006 ರಂದು ನೀಡಿರುವ ಸುತ್ತೋಲೆ, ಸರ್ಕಾರದ ಪತ್ರ ದಿನಾಂಕ:22-4-2008, ವಾಣಿಜ್ಯ

ತೆರಿಗೆಗಳ ಇಲಾಖೆಯ ನೌಕರರ ಸಕ್ರಮಾತಿ ವಿಷಯವು ಸಚಿವ ಸಂಪುಟ ಸಮಿತಿಯ ಪರಿಶೀಲನೆ ಹಾಗೂ ಪರಿಗಣನೆಯಲ್ಲಿರುತ್ತದೆ. ಉಪಸಮಿತಿಯ ಶಿಫಾರಸ್ಸಿನ ಬಗ್ಗೆ ಸಚಿವ ಸಂಪುಟವು ತೀರ್ಮಾನ ತೆಗೆದುಕೊಂಡಾಗ ಸದರಿ ಶಿಫಾರಸ್ಸು ಅಂತಿಮವಾಗಿದೆ ಎಂದು ಪರಿಗಣಿಸಬಹುದು ಎಂದು ತಿಳಿಸಿ. ಸಚಿವ ಸಂಪುಟ ಉಪಸಮಿತಿಯ ಶಿಫಾರಸ್ಸು ಇನ್ನೂ ಅಂತಿಮವಾಗಿರುವುದಿಲ್ಲ ಎಂದು ಸರ್ಕಾರದ ದಿನಾಂಕ:31-12-2010 ರ ಪತ್ರದಲ್ಲಿ ತಿಳಿಸಿದ್ದ ಹಿನ್ನೆಲೆಯಲ್ಲಿ ಮೇಲ್ಕಂಡ ಎರಡು ಮಧ್ಯಂತರ ತಡೆಯಾಜ್ಞೆ ಇಲ್ಲದೇ ಇದ್ದ ಪಕ್ಷದಲ್ಲಿ ದಿನಗೂಲಿ ನೌಕರರು ಸೇವೆಯಲ್ಲಿ ಮುಂದುವರೆಯುತ್ತಿರಲಿಲ್ಲ ಎಂದು ಮಾನ್ಯ ಉಚ್ಛ ನ್ಯಾಯಾಲಯದ ಗಮನಕ್ಕೆ ತರಲಾಗಿರುತ್ತದೆ. ಅಲ್ಲದೆ ದಿನಗೂಲಿ ನೌಕರರನ್ನು ಸಕ್ರಮಾತಿಗೊಳಿಸುವ ಸಂಬಂಧ ದಿನಾಂಕ:10-8-2006 ರಂದು ಹೊರಡಿಸಿರುವ ಅಧಿಕೃತ ಜ್ಞಾಪನಗಳನ್ನು ಹಿಂಪಡೆಯುವ ಸಂಬಂಧ ಸರ್ಕಾರವು ದಿನಾಂಕ:22-4-2008 ರಂದು ನೀಡಿರುವ ನಿರ್ದೇಶನ ಹಾಗೂ ದಿನಗೂಲಿ ನೌಕರರ ಸಕ್ರಮಾತಿ ವಿಷಯವು ಸಚಿವ ಸಂಪುಟದ ಪರಿಶೀಲನೆ ಹಾಗೂ ಪರಿಗಣನೆಯಲ್ಲಿರುತ್ತದೆ ಎಂಬ ಬಗ್ಗೆ ಸರ್ಕಾರವು ದಿನಾಂಕ:31-12-2010 ರಂದು ಇಲಾಖೆಗೆ ಬರೆದಿರುವ ಪತ್ರಗಳನ್ನೂ ಸಹ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ರಿಟ್ ಅರ್ಜಿಯಲ್ಲಿ ಅಡಕಗೊಳಿಸಿ ಈ ಹಿಂದೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನನುಸಾರ ಸಕ್ರಮಾತಿಗೊಳಿಸಿರುವ ದಿನಗೂಲಿ ನೌಕರರು ನಾಲ್ಕನೇ ಷರತ್ತಾದ ನ್ಯಾಯಾಲಯಗಳ ಅಥವಾ ನ್ಯಾಯಮಂಡಳಿಗಳ ಆದೇಶಕ್ಕೊಳಪಟ್ಟು 10 ವರ್ಷಗಳು ಅಥವಾ ಹೆಚ್ಚಿನ ಅವಧಿಗೆ ಅವರನ್ನು ಮುಂದುವರೆಸಿರಬಾರದು ಎಂಬುದನ್ನು ಪೂರೈಸಿರುವುದಿಲ್ಲವಾದ್ದರಿಂದ ಅವರು ಸಕ್ರಮಾತಿಗೆ ಅರ್ಹರಿರುವುದಿಲ್ಲ ಎಂಬ ಬಗ್ಗೆಯೂ ಸಹ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಸದರಿ ಅರ್ಜಿಯಲ್ಲಿ ಗೌರವಪೂರ್ವಕವಾಗಿ ತರಲಾಗಿರುತ್ತದೆ. ಆದರೆ, ಮಾನ್ಯ ಉಚ್ಛ ನ್ಯಾಯಾಲಯವು ಮೇಲ್ಕಂಡಂತೆ ತಿಳಿಸಿರುವ ಯಾವುದೇ ಅಂಶಗಳನ್ನು ಪರಿಗಣಿಸದೇ ಸಕ್ರಮಾತಿ ಹೊಂದಿದ ನೌಕರರ ಪರವಾಗಿ ದಿನಾಂಕ:03-7-2013 ರಂದು ಈ ಕೆಳಕಂಡಂತೆ ತೀರ್ಪು ನೀಡಿರುತ್ತದೆ.

"7. .......On perusal of the proviso as excerpted above, the seniority will have to be fixed from the day of their regularization i.e. from the date as mentioned against the respective name in the Official Memorandum and not from 10.8.2006. Hence, the impugned order dated 10.1.2013 passed in Application Nos.4702 to 4712/2012 does not call for any interference. Writ petition is liable to be dismissed. However, to facilitate the petitioners to carry out the directions issued by the tribunal, it is reasonable to grant some time and accordingly, the petitioners are directed to effect the seniority as per the Rules i.e., from the date on which the service of the respondents were regularized within three months from today."

ಮಾನ್ಯ ಉಚ್ಚನ್ಯಾಯಾಲಯದ ತೀರ್ಪನ್ನು ಮಾನ್ಯ ಸರ್ವೋಚ್ಚನ್ಯಾಯಾಲಯದಲ್ಲಿ ವಿಶೇಷ ಅನುಜ್ಞೆ ಅರ್ಜಿ (ಸಿವಿಲ್) ಸಂಖ್ಯೆ: 34164/2013 ರಡಿ ಸರ್ಕಾರವು ಪ್ರಶ್ನಿಸಿದ್ದು, ತತ್ಸಂಭಂದ ಮಾನ್ಯ ಸರ್ವೋಚ್ಚನ್ಯಾಲಯವು ದಿನಾಂಕ: 25-11-2013 ರಂದು ಈ ಕೆಳಕಂಡಂತೆ ತೀರ್ಪನ್ನು ನೀಡಿರುತ್ತದೆ.
" Heard Mr. Patil, learned senior counsel in support of this special leave petition. We donot see any error in the order passed by the High Court.

The above Special leave petition is dismissed."

ಮಾನ್ಯ ಸರ್ವೋಚ್ಚ ನ್ಯಾಯಾಲಯವೂ ಸಹ ಮಾನ್ಯ ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿದಿರುವ ಹಿನ್ನೆಲೆಯಲ್ಲಿ ಸಕ್ರಮಾತಿ ಹೊಂದಿದ ನೌಕರರುಗಳಿಗೆ ಜೇಷ್ಠತೆಯನ್ನು ನಿಗದಿಪಡಿಸಿ ನಂತರದ ಸೌಲಭ್ಯಗಳನ್ನು ನೀಡುವ ಸಂಬಂಧ ಈ ಕಛೇರಿಯ 30/09/2014ರ ಸುತ್ತೋಲೆಯಲ್ಲಿ ಎಲ್ಲಾ ಸರ್ಕಾರಿ ನೌಕರರಿಗೆ ನೀಡುವ ಹಾಗೆ ನೀಡಲು ಸೂಚಿಸಲಾಯಿತು. ಸುತ್ತೋಲೆಯ ಪ್ರತಿಯನ್ನು ಅನುಬಂಧ-7ರಂತೆ ಲಗತ್ತಿಸಿ ಸಲ್ಲಿಸಲಾಗಿದೆ.

ಸಕ್ರಮಾತಿ ಹೊಂದಿದ ನೌಕರರಿಗೆ ಸಕ್ರಮಾತಿ ಆದೇಶಗಳಲ್ಲಿ ಕಾಣಿಸಿರುವ ಅನುಬಂಧಗಳಲ್ಲಿರುವಂತೆ ಹತ್ತು ವರ್ಷ ಸೇವೆ ಪೂರೈಸಿದ ದಿನಾಂಕಕ್ಕೆ ಅನುಗುಣವಾಗಿ ಸಕ್ರಮಗೊಳಸಿದ ದಿನಾಂಕ ನೀಡಿರುವಂತೆ ಸೇವಾ ಜೇಷ್ಠತೆಯನ್ನು ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಹಾಗೂ ಶೀಘ್ರಲಿಪಿಗಾರರ ವೃಂದಗಳಲ್ಲಿ ನಿಗದಿಪಡಿಸಿ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಿ ಅದರನುಸಾರ ಮುಂದಿನ ಶ್ರೇಣಿಯ ಹುದ್ದೆಗಳಿಗೆ ಸ್ವತಂತ್ರ ಪ್ರಭಾರದ ವ್ಯವಸ್ಥೆಯಲ್ಲಿ ಅರ್ಹ ನೌಕರರನ್ನು ನೇಮಿಸಲಾಗಿರುತ್ತದೆ.

ಜೇಷ್ಠತಾಪಟ್ಟಿಗಳಲ್ಲಿ ಸಕ್ರಮಾತಿ ಹೊಂದಿದ ನೌಕರರುಗಳಿಗೆ ಸ್ಥಾನ ಕಲ್ಪಿಸಿರುವುದನ್ನು ಹಾಗೂ ಇಲಾಖೆಯಲ್ಲಿ ದಿನಾಂಕ 01/07/1984ರ ನಂತರ ಕಾನೂನು ಮತ್ತು ನಿಯಮ ಬಾಹಿರವಾಗಿ ದಿನಗೂಲಿ ಆಧಾರದ ಮೇಲೆ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪಂಗಂಡದ ನೌಕರರನ್ನು ಕಾನೂನು ಬಾಹಿರವಾಗಿ ಸಕ್ರಮಗೊಳಸಿ, ಪದೋನ್ನತಿ ನೀಡಿರುವುದರಿಂದ ಕಾನೂನು ಮತ್ತು ನಿಯಮಗಳ ಪಾಲನೆ ಮೂಲಕ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿವಂತೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿ.ವಿ ರಾಮು ಹಾಗೂ ಇತರರು ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಬೆಂಗಳೂರು ಇಲ್ಲಿ ಪ್ರಕರಣ ಸಂಖ್ಯೆ:131/2016(ಸೇವೆ) ದಾಖಲಿಸುವ ಮೂಲಕ ಪ್ರಶ್ನಿಸಿರುತ್ತಾರೆ. ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವು ದಿನಾಂಕ:02-3-2018 ರ ಆದೇಶದಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ.

1. " ವಾಣಿಜ್ಯ ತೆರಿಗೆಗಳ ಇಲಾಖೆಯು ದಿನಾಂಕ:01-7-1984 ರ ನಂತರ ದಿನಗೂಲಿ ನೌಕರರಾಗಿ ನೇಮಕಗೊಂಡ ನೌಕರರನ್ನು ಸರ್ವೋಚ್ಛ ನ್ಯಾಯಾಲಯವು ಶ್ರೀಮತಿ ಉಮಾದೇವಿ ಮತ್ತು ಇತರರು ಪ್ರಕರಣದಲ್ಲಿ ದಿನಾಂಕ:10-4-2006 ರಂದು ನೀಡಿರುವ ತೀರ್ಪಿಗೆ ಅನುಗುಣವಾಗುವಂತೆ ಮತ್ತು ಕರ್ನಾಟಕ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳಿಗೆ ಹಾಗೂ ಪತ್ರಗಳಿಗೆ ವಿರುದ್ಧವಾಗಿ 189 ದಿನಗೂಲಿ ನೌಕರರನ್ನು ದ್ವಿತೀಯ ದರ್ಜೆ ಸಹಾಯಕರನ್ನಾಗಿ ನೇಮಕ ಮಾಡಿಕೊಂಡು ದಿನಾಂಕ:10-8-2006 ರಂದು ಮತ್ತು ದಿನಾಂಕ:06-01-2007 ರಂದು ಸಕ್ರಮಾತಿ ಮಾಡಿಕೊಂಡಿರುವುದನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯತಕ್ಕದ್ದು.
2. 189 ದ್ವಿತೀಯ ದರ್ಜೆ ಸಹಾಯಕರ ಜ್ಯೇಷ್ಠತಾ ಪಟ್ಟಿ ತಯಾರಿಸುವ ಸಂದರ್ಭದಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಿ ಕಾನೂನಾತ್ಮಕವಾಗಿ ಹಾಗೂ ನಿಯಮಾನುಸಾರ ನೇಮಕಗೊಂಡ ದ್ವಿತೀಯ ದರ್ಜೆ ನೌಕರರಿಗೆ ಸಂಬಂಧಪಟ್ಟಂತೆ ನಿಯಮಾನುಸಾರ ಜ್ಯೇಷ್ಠತಾಪಟ್ಟಿಯನ್ನು ಸರಿಪಡಿಸಿ ಪ್ರಕಟಿಸಬೇಕು.
3. ಕಾನೂನಾತ್ಮಕವಾಗಿ ಹಾಗೂ ನಿಯಮಾನುಸಾರ ನೇಮಕವಾಗಿರುವ ಯಾವುದೇ ದ್ವಿತೀಯ ದರ್ಜೆ ಸಹಾಯಕರಿಗೆ ಅನ್ಯಾಯವಾಗಿದ್ದರೆ ಸರಿಪಡಿಸಬೇಕು ಮತ್ತು ಜ್ಯೇಷ್ಠತಾಪಟ್ಟಿಯನ್ನು ತಯಾರಿಸಿ ಅರ್ಹತಾ ದಿನಾಂಕದಿಂದ ಮುಂಬಡ್ತಿಯನ್ನು ನೀಡಬೇಕು.
4. ದಿನಾಂಕ:01-7-1984 ರ ನಂತರ ಅಕ್ರಮವಾಗಿ ನೇಮಕಗೊಂಡು 189 ದಿನಗೂಲಿ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012 ರ ಅಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿದೆ. ನಿರ್ದೇಶನ ತಲುಪಿದ 30 ದಿನಗಳೊಳಗಾಗಿ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಆಯೋಗಕ್ಕೆ ಸಲ್ಲಿಸಲು ಸೂಚಿಸಿದೆ."

ಮಾನ್ಯ ಆಯೋಗದ ಮೇಲ್ಕಂಡಂತೆ ತಿಳಿಸಿರುವ ಆದೇಶವನ್ನು ಪರಿಶೀಲಿಸಲಾಗಿ ಅದರಲ್ಲಿ ಮಾನ್ಯ ಆಯೋಗವು ಈ ಕೆಳಕಂಡ ಅಂಶಗಳನ್ನು ಪ್ರಮುಖವಾಗಿ ಗಮನಿಸಿರುತ್ತದೆ.

1. ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಾಂಕ:1-7-1984ರ ನಂತರ 189 ದ್ವಿತೀಯ ದರ್ಜೆ ಸಹಾಯಕರನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರದಿಂದ

ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ ಮತ್ತು ಆ ಸಂದರ್ಭದಲ್ಲಿ ಇಲಾಖೆಯು ಯಾವುದೇ ಭರವಸೆಯನ್ನೂ ಕೂಡ ಈ ನೌಕರರಿಗೆ ನೀಡಿರುವುದಿಲ್ಲ.

2. ಸದರಿ ಅಭ್ಯರ್ಥಿಗಳ ನೇಮಕಾತಿ ಯಾವುದೇ ಅರ್ಹತೆ ಪರೀಕ್ಷೆ ಅಥವಾ ಮೆರಿಟ್ ಆಧಾರದ ಮೇಲೆ ನೇಮಕಾತಿ ಆಗಿರುವುದಿಲ್ಲ.
3. ಸಂವಿಧಾನಬದ್ಧವಾದ ರೋಸ್ಟರ್ ಪದ್ಧತಿಯನ್ನು ಪಾಲಿಸಿರುವುದಿಲ್ಲ.
4. ಕೇವಲ ಜಾತಿ, ಮತ, ಸಂಬಂಧಿತನ, ಕಾನೂನು ಸಮ್ಮತವಲ್ಲದ, ನ್ಯಾಯಕ್ಕೆ ಸಮ್ಮತವಲ್ಲದ ಮಾನದಂಡಗಳ ಮೇಲೆ ನೇಮಕಾತಿ ಮಾಡಲಾಗಿರುತ್ತದೆ.
5. ಕೆಲವರು ದಿನಗೂಲಿ ಸೇವೆಯಲ್ಲಿ ಮುಂದುವರೆದಿರುವುದು ಕೂಡ ನ್ಯಾಯಾಲಯಗಳು ನೀಡಿದ ತಡೆಯಾಜ್ಞೆ ಅಥವಾ ಆದೇಶಗಳ ಮೇಲೆ ಇರುತ್ತದೆ.
6. ಸದರಿ ನೌಕರರ ಸೇವೆಯು ಸತತವಾಗಿ 10 ವರ್ಷಗಳ ಪೂರ್ಣಗೊಂಡಿಲ್ಲದೇ ಸರ್ವಿಸ್ ಬ್ರೇಕ್ ಆಗಿರುತ್ತದೆ ಎಂದು ನೌಕರರು ಸಲ್ಲಿಸಿರುವ ಮನವಿಯಲ್ಲಿ ಉಲ್ಲೇಖಿಸಲಾಗಿದ್ದು, ಅವುಗಳನ್ನೂ ಕೂಡ ಪರಿಗಣಿಸಿ ಪರಿಶೀಲಿಸಲಾಗಿದೆ ಮತ್ತು ಸದರಿ ನೌಕರರು ಸುಪ್ರೀಂ ಕೋರ್ಟಿಗೆ ಸಕ್ರಮಾತಿಗಾಗಿ ಸಲ್ಲಿಸಿದ್ದ ಮನವಿಯು ಸಕ್ಷಮ ಪ್ರಾಧಿಕಾರದಿಂದ ಬಂದಿರುವುದಿಲ್ಲವೆಂಬ ಕಾರಣಕ್ಕೆ ತಿರಸ್ಕೃತಗೊಂಡಿರುತ್ತದೆ ಎಂದು ಮನವಿಯಲ್ಲಿ ತಿಳಿಸಿರುತ್ತಾರೆ. ಈ ಅಂಶವನ್ನು ಗಮನಿಸಲಾಗಿದೆ.
7. ಶ್ರೀಮತಿ ಉಮಾದೇವಿ ಹಾಗೂ ಇತರರು ಪ್ರಕರಣ ಸಂಖ್ಯೆ ಮೇಲ್ಮನವಿ (ಸಿವಿಲ್) 3595-3612/1999 ನ್ನು ಆಧಾರವಾಗಿಟ್ಟುಕೊಂಡು ನಾಲ್ಕು ಷರತ್ತುಗಳನ್ನು ವಿಧಿಸಿ ಅವುಗಳು ಪೂರೈಸಿದ್ದರೆ ಮಾತ್ರ ಸೇವೆಯಲ್ಲಿ ಸಕ್ರಮಗೊಳಿಸುವಂತೆ ದಿನಾಂಕ:10-4-2006 ರಲ್ಲಿ ತೀರ್ಮ ನೀಡಿರುವುದನ್ನು ಮಾನ್ಯ ಆಯೋಗವು ಉಲ್ಲೇಖಿಸಿರುತ್ತದೆ.
8. ರಿಟ್ ಅರ್ಜಿ ಸಂಖ್ಯೆ 8192/1990 ರಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯವು ದಿನಾಂಕ:11-4-1990 ರಲ್ಲಿ ಆದೇಶ ಮಾಡಿ ದಿನಗೂಲಿ ಆಧಾರದ ಮೇಲೆ ದಿನಾಂಕ:01-7-1984 ರ ನಂತರ ನೇಮಕವಾಗಿ 240 ದಿವಸ ನಿರಂತರವಾಗಿ ಕಾರ್ಯನಿರ್ವಹಿಸಿದ್ದಲ್ಲಿ, ಅಂತಹ ನೌಕರರನ್ನು ಕೆಲಸದಿಂದ ತೆಗೆದುಹಾಕಬಾರದಾಗಿ ಮಧ್ಯಂತರ ಆದೇಶ ಮಾಡಿರುತ್ತದೆ. ಇದೇ ರೀತಿ ರಿಟ್ ಅರ್ಜಿ ಸಂಖ್ಯೆ: 12610/1993 ರಲ್ಲಿ ದಿನಾಂಕ:23-4-1993 ರಲ್ಲಿ ಮತ್ತೊಂದು ಮಧ್ಯಂತರ ಆದೇಶವನ್ನು ಮಾಡಿರುತ್ತದೆ. ಈ ಆದೇಶದಂತೆ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ನೇಮಕಗೊಂಡ ಹಲವಾರು ದಿನಗೂಲಿ ನೌಕರರೂ ಸಹ ಸೌಲಭ್ಯ ಮತ್ತು ರಕ್ಷಣೆಯನ್ನು ಪಡೆದು ಮುಂದುವರೆದಿರುವುದನ್ನು ಸಮಿತಿಯು ಗಮನಿಸಿರುವ ಬಗ್ಗೆ ತಿಳಿಸಿರುತ್ತದೆ.
9. ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಬಹುತೇಕ ನೌಕರರು ಖಾಲಿ ಹುದ್ದೆ ಎದುರು ನೇಮಕವಾಗಿರುವುದಿಲ್ಲ, ಹತ್ತು ವರ್ಷಗಳ ಸತತ ಸೇವೆಯನ್ನು ಪೂರೈಸಿರುವುದಿಲ್ಲ, ನಾಲ್ಕನೇ ಷರತ್ತನ್ನು ಮಾತ್ರ ಪೂರೈಸಿರುವುದಿಲ್ಲವೆಂದು ಹೇಳಿರುವುದನ್ನು ಸಮಿತಿಯು ಗಮನಿಸಿರುವುದಾಗಿ ತಿಳಿಸಿರುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ದಿನಾಂಕ:13-11-2006 ರ ಸುತ್ತೋಲೆ ಮತ್ತು ಆರ್ಥಿಕ ಇಲಾಖೆಯ ದಿನಾಂಕ:22-4-2008 ರ ಪತ್ರ ಮತ್ತು ವಾಣಿಜ್ಯ ತೆರಿಗೆಗಳ ಇಲಾಖೆಯು ದಿನಾಂಕ:13-4-2009ರಲ್ಲಿ ತೀರ್ಮಾನಿಸಿರುವ ನಡವಳಿಗಳನ್ನೂ ಕೂಡ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಗಮನಕ್ಕೆ ತಂದಿರುವುದಿಲ್ಲ. ಅದೇ ರೀತಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿಯೂ ದಿನಾಂಕ:22-4-2008 ರ ಆರ್ಥಿಕ ಇಲಾಖೆಯ ಪತ್ರವನ್ನು ಮಾನ್ಯ ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ.

ಸರ್ಕಾರದ ಪತ್ರ ಹಾಗೂ ಸುತ್ತೋಲೆಗಳನ್ನು ಮಾನ್ಯ ನ್ಯಾಯಾಲಯಗಳ ಗಮನಕ್ಕೆ ತರದೇ ಇದ್ದ ಪ್ರಯುಕ್ತ ವ್ಯತಿರಿಕ್ತ ಆದೇಶಗಳನ್ನು ಮಾನ್ಯ ನ್ಯಾಯಾಲಯಗಳು ನೀಡಿರುವುದು ಗೋಚರವಾಗಿರುತ್ತದೆ ಎಂದು ಮಾನ್ಯ ಆಯೋಗವು ಅಭಿಪ್ರಾಯಪಟ್ಟಿರುತ್ತದೆ.

ಮಾನ್ಯ ಆಯೋಗವು ಈ ರೀತಿ ಆದೇಶ ನೀಡುವ ಸಂದರ್ಭದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ:10-4-2006 ರಂದು ನೀಡಿರುವ ತೀರ್ಪಿನಲ್ಲಿ ವಿಧಿಸಿರುವ ನಾಲ್ಕು ಷರತ್ತುಗಳನ್ನು ಪೂರೈಸದ ನೌಕರರನ್ನು ಸಕ್ರಮಾತಿಗೊಳಸಲಾಗಿರುತ್ತದೆ ಎಂದು ಮಾನ್ಯ ಆಯೋಗವು ಅಭಿಪ್ರಾಯಪಟ್ಟಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ: ಆಇ 31 ವಾತೆಸಿ 2015 ದಿನಾಂಕ:17-3-2017 ರ ಪತ್ರದನುಸಾರ ಸಕ್ರಮಾತಿ ಹೊಂದಿದ ನೌಕರರನ್ನು ದಿನಾಂಕ:25-5-2006 ರ ಸುತ್ತೋಲೆಯನ್ವಯ ಸಕ್ರಮಾತಿಗೊಳಸಿದ್ದಲ್ಲಿ ಅಂತಹ ಪ್ರಕರಣಗಳನ್ನು ಮನರ್ ಪರಿಶೀಲಿಸಿ ಅಂತಹ ಆದೇಶಗಳನ್ನು ಹಿಂದಕ್ಕೆ ಪಡೆಯುವಂತೆ ಸೂಚಿಸಿರುವ ಅಂಶವನ್ನು ಮಾನ್ಯ ಆಯೋಗವು ಪರಿಗಣಿಸಿ ಅದರನುಸಾರ ಸೂಕ್ತ ಕ್ರಮ ಕೈಗೊಳ್ಳದೇ ಅಕ್ರಮವಾಗಿ ನೇಮಕಗೊಂಡಿರುವ ದಿನಗೂಲಿ ನೌಕರರನ್ನು ಇಲಾಖೆಯು ಪ್ರತಿ ಹಂತದಲ್ಲಿಯೂ ರಕ್ಷಣೆ ಮಾಡಿಕೊಂಡು ಬಂದಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ. ಮಾನ್ಯ ಆಯೋಗದ ಆದೇಶವನ್ನು 30 ದಿವಸಗಳೊಳಗಾಗಿ ಅನುಷ್ಠಾನಗೊಳಸುವ ಬಗ್ಗೆ ನಿರ್ದೇಶನವಿರುತ್ತದೆ. ಮಾನ್ಯ ಆಯೋಗದ ದಿನಾಂಕ:02-3-2018 ರ ಆದೇಶವನ್ನು **ಅನುಬಂಧ-8 ರಂತೆ** ಲಗತ್ತಿಸಿ ಸಲ್ಲಿಸಿದೆ.

ದಿನಾಂಕ:02-3-2018 ರ ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವು ನೀಡಿರುವ ಆದೇಶವನ್ನು ಈ ಕೆಳಕಂಡ ಕಾರಣಗಳ ಹಿನ್ನೆಲೆಯಲ್ಲಿ ಅನುಷ್ಠಾನಗೊಳಸಲು ಕಷ್ಟಸಾಧ್ಯವಾಗುತ್ತದೆ.

1. ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದ ನೌಕರರು ತಮ್ಮನ್ನು ಸೇವೆಯಲ್ಲಿ ಸಕ್ರಮಾತಿಗೊಳಸುವ ಸಂಬಂಧ ಮಾನ್ಯ ಕರ್ನಾಟಕ ಆಡಳತ ನ್ಯಾಯಮಂಡಳಯ ಮುಂದೆ ಪ್ರಥಮವಾಗಿ 1997 ನೇ ಇಸವಿಯಲ್ಲಿ ಶ್ರೀಮತಿ ಉಮಾದೇವಿ ಹಾಗೂ ಇತರರು ಅರ್ಜಿ ಸಂಖ್ಯೆ:1031-1055/97 ರಡಿ ಪ್ರಶ್ನಿಸಿರುತ್ತಾರೆ. ಈ ರೀತಿ ಪ್ರಶ್ನಿಸಿದ್ದನ್ನು ಮಾನ್ಯ ಕರ್ನಾಟಕ ಆಡಳತ ನ್ಯಾಯಮಂಡಳಯು ದಿನಾಂಕ:05-12-1997 ರ ಆದೇಶದಲ್ಲಿ ಅರ್ಜಿದಾರರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಸಿರುತ್ತದೆ.
2. ಮಾನ್ಯ ಸರ್ವೋಚ್ಛ ನ್ಯಾಯಾಲಯವು ವಿಧಿಸಿದ್ದ ನಾಲ್ಕನೇ ಷರತ್ತನ್ನು ಆಧರಿಸಿ ಸಿಬ್ಬಂದಿ ಮತ್ತು ಆಡಳತ ಸುಧಾರಣಾ ಇಲಾಖೆಯು ಸುತ್ತೋಲೆ ಸಂಖ್ಯೆ: ಸಿಆಸುಇ 25 ಸೇಸ್ಥಅ 2003 (ಭಾ) ದಿನಾಂಕ:13-11-2006 ರಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ದಿನಾಂಕ:10-4-1990 ಮತ್ತು ದಿನಾಂಕ:23-04-1993 ರಂದು ನೀಡಿರುವ ಆದೇಶಗಳನುಸಾರ ದಿನಾಂಕ:01-4-1984 ರ ನಂತರ ನೇಮಕಗೊಂಡ ದಿನಗೂಲಿ ನೌಕರರನ್ನು ಸೇವೆಯಲ್ಲಿ ಮುಂದುವರೆಸಲಾಗಿದೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ನೇಮಕಗೊಂಡ ನೌಕರರು ರಿಟ್ ಅರ್ಜಿ ಸಂಖ್ಯೆ 8192/90 ರಡಿ ಅರ್ಜಿದಾರರಾಗಿರುವ ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಮಹಾಮಂಡಳ, ಹುಬ್ಬಳ್ಳ ಈ ಮಂಡಳಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:11-4-1990 ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆ ನೌಕರರು ಅರ್ಜಿದಾರರಾಗಿ ಮಾನ್ಯ ಉಚ್ಛ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಅದರಲ್ಲಿ ಅವರು ಪಾಲ್ಗೊಂಡಿರುವುದಿಲ್ಲ.
3. ರಿಟ್ ಅರ್ಜಿ ಸಂಖ್ಯೆ 12610/93 ರಡಿ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:23-4-1993 ರಂದು ನೀಡಿರುವ ಮಧ್ಯಂತರ ಆದೇಶದಲ್ಲಿರುವ ವಾದಿಗಳು ಕರ್ನಾಟಕ ಸಾಂದರ್ಭಿಕ ಮತ್ತು ದಿನಮಜೂರಿ ನೌಕರರ ಸಂಘ ಆಗಿದ್ದು ಇದರಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆಯ ದಿನಗೂಲಿ ನೌಕರರು ಸೇರ್ಪಡೆಯಾಗಿರುವ ಬಗ್ಗೆ ಹಾಗೂ ಪ್ರತಿವಾದಿಗಳಾಗಿ ವಾಣಿಜ್ಯ ತೆರಿಗೆ ಇಲಾಖೆಯ

ಆಯುಕ್ತರನ್ನು ಸೇರ್ಪಡೆ ಮಾಡಿರುವುದು ಸದರಿ ರಿಟ್ ಅರ್ಜಿಯಲ್ಲಿ ಲಭ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆಗೆ ಸಂಬಂಧಿಸಿದಂತೆ ಸದರಿ ಮಧ್ಯಂತರ ಆದೇಶವನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ.

4. ದಿನಾಂಕ:26-12-2008 ರಂದು ಸರ್ಕಾರಕ್ಕೆ ಇಲಾಖೆಯು ಬರೆದಿರುವ ಪತ್ರದಲ್ಲಿ ಇಲಾಖೆಯ ದಿನಗೂಲಿ ನೌಕರರಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯಗಳ ತಡೆಯಾಜ್ಞೆ ಇರುವುದಿಲ್ಲ. ಇಲಾಖೆಯ ದಿನಗೂಲಿ ನೌಕರರು ಸಕ್ರಮಕ್ಕಾಗಿ ಪ್ರತ್ಯೇಕವಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:404/90 ಸಲ್ಲಿಸಿದ್ದರು. ಈ ರೀತಿ ಸಲ್ಲಿಸಿರುವ ಅರ್ಜಿಯನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ:09-09-1992 ರಂದು ಇತ್ಯರ್ಥಪಡಿಸಿ ತಮ್ಮ ಅಹವಾಲನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಮುಂದೆ ಸಲ್ಲಿಸಬಹುದೆಂದು ಅಭಿಪ್ರಾಯಪಟ್ಟಿರುತ್ತದೆ ಹಾಗೂ ಅರ್ಜಿಯನ್ನು ಅಂತಿಮವಾಗಿ ಹಿಂಪಡೆಯಲಾಗಿದೆ ಎಂಬುದಾಗಿ ಭಾವಿಸುತ್ತಾ ವಜಾಗೊಳಿಸಿರುತ್ತದೆ. ಆದುದರಿಂದ ರಿಟ್ ಅರ್ಜಿ ಸಂಖ್ಯೆ:8192/90 ದಿನಾಂಕ:11-4-1990 ಇದು ಇಲಾಖೆಯ ದಿನಗೂಲಿ ನೌಕರರಿಗೆ ಅನ್ವಯಿಸುವುದಿಲ್ಲ.

5. ರಿಟ್ ಅರ್ಜಿ ಸಂಖ್ಯೆ 12610/1993 ರಡಿ ನೀಡಿದ್ದ ತಡೆಯಾಜ್ಞೆಗೆ ಮುಂದುವರೆದಂತೆ ಮಾನ್ಯ ಉಚ್ಛ ನ್ಯಾಯಾಲಯದ ಏಕಸದಸ್ಯ ಪೀಠವು ದಿನಾಂಕ:22-9-1998 ರಂದು ಅಂತಿಮವಾಗಿ ತೀರ್ಪು ನೀಡಿದ್ದು, ಸದರಿ ತೀರ್ಪಿನಲ್ಲಿ ಒಳಗೊಂಡಿರುವ ಅರ್ಜಿದಾರರು ಸಕ್ರಮಾತಿಗೊಳಿಸುವ ಸಂಬಂಧ ತಾವು ಕಾರ್ಯನಿರ್ವಹಿಸುತ್ತಿದ್ದ ಸಂಬಂಧಿಸಿದ ಇಲಾಖೆಗಳಿಗೆ ಮನವಿ ಸಲ್ಲಿಸುವುದರ ಮೂಲಕ ಕೋರಬಹುದೆಂದು ಸೂಚಿಸಿ ಅವುಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳುವ ಬಗ್ಗೆ ಪ್ರತಿವಾದಿಗಳಿಗೆ ಮಾನ್ಯ ಉಚ್ಛ ನ್ಯಾಯಾಲಯವು ನಿರ್ದೇಶಿಸಿರುತ್ತದೆ. ಏಕಸದಸ್ಯಪೀಠದ ತೀರ್ಪನ್ನು **ಅನುಬಂಧ-9** ರಂತೆ ಲಗತ್ತಿಸಿದೆ.

6. ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಪೀಲ್ ಸಂಖ್ಯೆ 120 ಮತ್ತು 128-329/1999 ರಡಿ ದಿನಾಂಕ:01-02-2001 ರಂದು ನೀಡಿರುವ ತೀರ್ಪಿನಲ್ಲಿ ಮಾನ್ಯ ಏಕಸದಸ್ಯ ಪೀಠವು ನೀಡಿರುವ ರಿಟ್ ಅರ್ಜಿ ಸಂಖ್ಯೆ 12610/1993 ಹಾಗೂ ಇತರೆ ಅರ್ಜಿಗಳಲ್ಲಿ ನೀಡಿದ ತೀರ್ಪುಗಳನ್ನು ವಜಾಗೊಳಿಸಿ ರಾಜ್ಯಸರ್ಕಾರವು ಸಲ್ಲಿಸಿದ ಮೇಲ್ಮನವಿಗಳನ್ನು ಪುರಸ್ಕರಿಸಿರುತ್ತದೆ. ಈ ರೀತಿ ನೀಡಿರುವ ರಿಟ್ ಅರ್ಜಿ/ಮೇಲ್ಮನವಿಗಳಲ್ಲಿ ಇರುವ ವಾದಿ/ಪ್ರತಿವಾದಿಗಳು ಜಿಲ್ಲಾ ಪರಿಷತ್ ಹಾಗೂ ಇತರೆ ಇಲಾಖೆಗಳಿಗೆ ಸಂಬಂಧಿಸಿದವರಾಗಿರುತ್ತಾರೆ. ಈ ಅರ್ಜಿಯಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತರು ವಾದಿ/ಪ್ರತಿವಾದಿಗಳಾಗಿರುವುದಿಲ್ಲ. ಈ ರೀತಿ ನೀಡಿರುವ ವಿಭಾಗೀಯ ಪೀಠದ ತೀರ್ಪನ್ನು **ಅನುಬಂಧ-10** ರಂತೆ ಲಗತ್ತಿಸಿ ಸಲ್ಲಿಸಿದೆ.

7. ವಾಣಿಜ್ಯ ತೆರಿಗೆಗಳ ಇಲಾಖೆಗೆ ಸಂಬಂಧಿಸಿದಂತೆ, ದಿನಾಂಕ:11-9-1998 ರಂದು ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ಡಬ್ಲ್ಯೂ ಎ 3190-3207/98 ರಡಿ ತೀರ್ಪು ನೀಡಿ, ಇಲಾಖಾ ನೌಕರರು 10-12 ವರ್ಷಗಳ ಕಾಲ ಮಂಜೂರಾದ ಹುದ್ದೆಗಳಲ್ಲಿ ನಿಯತ ನೌಕರರು ನಿರ್ವಹಿಸುವ ಕಾರ್ಯಗಳನ್ನು ನಿರ್ವಹಿಸುತ್ತಿದ್ದು ಅವರುಗಳಿಗೆ ನಿಯತ ನೌಕರರಿಗೆ ನೀಡುವಂತೆ ಸಂಬಳ ಹಾಗೂ ಇತರೆ ಭತ್ಯೆಗಳನ್ನು ನೇಮಕಾತಿ ಹೊಂದಿದ ದಿನಾಂಕಗಳಿಂದ ನೀಡಲು ಹಾಗೂ ಅವರನ್ನು ಸಕ್ರಮಾತಿಗೆ ಪರಿಗಣಿಸಲು ನಿರ್ದೇಶನ ನೀಡಿರುತ್ತದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ದಿನಾಂಕ:13-11-2006 ರಂದು ನೀಡಿರುವ ಸುತ್ತೋಲೆಯಲ್ಲಿ ನಮೂದಿಸಿರುವ ದಿನಾಂಕ:23-4-1993 ರ ಮಧ್ಯಂತರ ಆದೇಶವು ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಅನ್ವಯವಾಗುವುದಿಲ್ಲವೆಂಬ ಅಂಶ ಮೇಲ್ಕಂಡ ತೀರ್ಪಿನನುಸಾರ ಸ್ಪಷ್ಟವಾಗುತ್ತದೆ.

8. ವಾಣಿಜ್ಯ ತೆರಿಗೆಗಳ ಇಲಾಖೆಯ ದಿನಗೂಲಿ ನೌಕರರಾದ ಶ್ರೀ ಗಣೇಶ್ ರಾವ್ ಪ್ರಕರಣದ ರಿಟ್ ಅಪೀಲ್ ಸಂಖ್ಯೆ:1592-1638/2000 ಮತ್ತು ಹುಬ್ಬಳ್ಳಿ ಪ್ರಕರಣ ರಿಟ್ ಅಪೀಲ್ ಸಂಖ್ಯೆ 120/99 ಎರಡೂ ಪ್ರಕರಣಗಳು ಉಚ್ಛ ನ್ಯಾಯಾಲಯದ ಒಂದೇ ವಿಭಾಗೀಯ ಪೀಠದ ಮುಂದೆ ಇದ್ದಂತಹ

ಸಂದರ್ಭದಲ್ಲಿ ದಿನಾಂಕ:31-8-2000ದಂದು ಹುಬ್ಬಳ್ಳಿ ಪ್ರಕರಣದಿಂದ ವಾಣಿಜ್ಯ ತೆರಿಗೆ ಇಲಾಖೆಯ ಪ್ರಕರಣವನ್ನು ಪ್ರತ್ಯೇಕ ಮಾಡಿ ಬೇರೆ ವಿಭಾಗೀಯ ಪೀಠಕ್ಕೆ ವರ್ಗಾವಣೆ ಮಾಡಿರುವುದರಿಂದ ಸರ್ಕಾರದ ಸುತ್ತೋಲೆಯಲ್ಲಿ ನಮೂದಿಸಿರುವ 11-4-1990 ಮತ್ತು 24-3-1993 ರ ತಡೆಯಾಜ್ಞೆಗಳು ಇಲಾಖೆಯ ದಿನಗೂಲಿ ನೌಕರರಿಗೆ ಸಂಬಂಧಪಟ್ಟಿರುವುದಿಲ್ಲ.

9. ರಿಟ್ ಅರ್ಜಿ ಸಂಖ್ಯೆ 12610/1993 ರಡಿ ಮಾನ್ಯ ಏಕಸದಸ್ಯಪೀಠವು ನೀಡಿದ್ದ ತೀರ್ಪಿಗೆ ಸಂಬಂಧಿಸಿದಂತೆ ಸರ್ಕಾರವು ಮಾನ್ಯ ವಿಭಾಗೀಯ ಪೀಠದ ಮುಂದೆ ರಿಟ್ ಅಪೀಲ್ ಸಂಖ್ಯೆ:120/99 ರಲ್ಲಿ ಸಲ್ಲಿಸಿದ ಅರ್ಜಿಯನ್ನು ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ಇತ್ಯರ್ಥಪಡಿಸಿ ದಿನಾಂಕ:01-02-2001 ರಂದು ತೀರ್ಮ ನೀಡಿ, ಸದರಿ ಮೇಲ್ಮನವಿಯಲ್ಲಿರುವ ಪ್ರತಿವಾದಿಗಳನ್ನು ಸಕ್ರಮಾತಿಗೊಳಸಲು ಸಾಧ್ಯವಿರುವುದಿಲ್ಲವೆಂದು ತಿಳಸಿ ಸರ್ಕಾರವು ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸಿ ಪ್ರತಿವಾದಿಗಳಗೆ ವಿರುದ್ಧವಾಗಿ ಆದೇಶ ನೀಡಿರುತ್ತದೆ. ಇದರಲ್ಲಿ ಪ್ರತಿವಾದಿಗಳು ಜಿಲ್ಲಾ ಪಂಚಾಯತ್ ಹಾಗೂ ಇತರೆ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರ ಸಂಘದ ಸದಸ್ಯರುಗಳು ಮಾತ್ರವಿದ್ದು ವಾಣಿಜ್ಯ ತೆರಿಗೆಗಳ ಇಲಾಖೆಯ ದಿನಗೂಲಿ ನೌಕರರು ಸದರಿ ಸಂಘದಲ್ಲಿ ಇರುವ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪಿನಲ್ಲಿ ಕಂಡುಬಂದಿರುವುದಿಲ್ಲ. ಮಾನ್ಯ ಉಚ್ಛ ನ್ಯಾಯಾಲಯವು ಏಕಸದಸ್ಯ ಪೀಠವು ರಿಟ್ ಅರ್ಜಿ ಸಂಖ್ಯೆ 12610/93 ರಡಿ ದಿನಾಂಕ:01-7-1984 ರಿಂದ ದಿನಗೂಲಿ ನೌಕರರಾಗಿ ನೇಮಕಾತಿ ಹೊಂದಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ, ಜಿಲ್ಲಾ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಸೇವೆಯಿಂದ ವಜಾಗೊಳಸಬಾರದೆಂದು ನೀಡಿರುವ ತಡೆಯಾಜ್ಞೆಗೆ ಸಂಬಂಧಿಸಿದಂತೆ ಅಂತಿಮವಾಗಿ ಮಾನ್ಯ ಏಕಸದಸ್ಯ ಪೀಠವು ದಿನಾಂಕ:22-9-1998 ರಂದು ನೀಡಿರುವ ತೀರ್ಪಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ದಿನಾಂಕ:01-02-2001 ರಂದು ನೀಡಿರುವ ತೀರ್ಪಿನಲ್ಲಿ ದಿನಾಂಕ:01-7-1984 ರ ನಂತರ ದಿನಗೂಲಿ ಆಧಾರದಲ್ಲಿ ನೇಮಕಾತಿ ಹೊಂದಿರುವ ನೌಕರರು ಪ್ರಾರಂಭದಲ್ಲಿಯೇ ನಿಯಮಬದ್ಧವಾಗಿ ನೇಮಕಾತಿ ಹೊಂದದೇ ಇರುವ ಪ್ರಯುಕ್ತ ಅಂತಹವರುಗಳನ್ನು ಸೇವೆಯಲ್ಲಿ ಸಕ್ರಮಾತಿಗೊಳಸುವ ಸಂಬಂಧ ನಿದೇಶನ ನೀಡಲು ಸಾಧ್ಯವಿರುವುದಿಲ್ಲವೆಂದು ತಿಳಸುತ್ತಾ ಸರ್ಕಾರದ ಮೇಲ್ಮನವಿಯನ್ನು ಪುರಸ್ಕರಿಸಿರುತ್ತದೆ.

10. ಮೇಲಿನಂತೆ ನೀಡಿರುವ ವಿಭಾಗೀಯ ಪೀಠದ ತೀರ್ಪಿನ ವಿರುದ್ಧ ದಿನಗೂಲಿ ನೌಕರರ ಸಂಘವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಎಸ್‌ಎಲ್‌ಪಿ ಯನ್ನು ಸಲ್ಲಿಸಿತ್ತು. ದಿನಾಂಕ:10-4-2006 ರಂದು ಸರ್ವೋಚ್ಛ ನ್ಯಾಯಾಲಯದ ಸಂವಿಧಾನ ಪೀಠವು ಹುಬ್ಬಳ್ಳಿ ಸಂಘದ ಸಿವಿಲ್ ಅಪೀಲನ್ನು ವಜಾಗೊಳಸಿದೆ.

11. ಆದರೆ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಇಲಾಖಾ ನೌಕರರಿಗೆ ಸಂಬಂಧಪಟ್ಟಂತೆ ಇದ್ದ ಪ್ರಕರಣವನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಂವಿಧಾನ ಪೀಠವು ದಿನಾಂಕ:10-4-2006 ರಂದು ನೀಡಿರುವ ತೀರ್ಪಿನಲ್ಲಿ ನೌಕರರ ಪರವಾಗಿ ತೀರ್ಪನ್ನು ನೀಡಿರುತ್ತದೆ.

12. ಸಿಬ್ಬಂದಿ ಮತ್ತು ಆಡಳತ ಸುಧಾರಣಾ ಇಲಾಖೆಯು ದಿನಾಂಕ:13-11-2006 ರಂದು ನೀಡಿರುವ ಸುತ್ತೋಲೆಯಲ್ಲಿ, ದಿನಾಂಕ:11-4-1990 ಮತ್ತು 23-4-1993 ರಂದು ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ಆದೇಶಗಳನ್ವಯ ರಾಜ್ಯದಲ್ಲಿರುವ ಬಹುಪಾಲು ನೌಕರರು ಸೇವೆಯಲ್ಲಿ ಮುಂದುವರೆದಿರುತ್ತಾರೆ ಎಂಬ ಅಂಶವನ್ನು ತಿಳಸಿರುತ್ತದೆ. ಆದರೆ ಬಹುಪಾಲು ಇಲಾಖೆಗಳು ಎಂದರೆ ಮೇಲ್ಕಂಡ ದಿನಾಂಕಗಳಲ್ಲಿ ನೀಡಿರುವ ಮಾನ್ಯ ಉಚ್ಛ ನ್ಯಾಯಾಲಯದ ತೀರ್ಮಗಳಲ್ಲಿ ಒಳಗೊಂಡಿರುವ ಇಲಾಖೆಗಳಗೆ ಮಾತ್ರ ಅನ್ವಯಿಸಿ, ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಸಂಬಂಧ ಪಟ್ಟವುಗಳಾಗಿರುವುದಿಲ್ಲ. ಸದರಿ ಅಂಶವನ್ನು ಈ ಕಛೇರಿಯ ದಿನಾಂಕ:26-12-2008 ರ ಪತ್ರದಲ್ಲಿ ಸವಿಸ್ತಾರವಾಗಿ ಸರ್ಕಾರಕ್ಕೆ ವರದಿ

ಸಲ್ಲಿಸಲಾಗಿರುತ್ತದೆ. ಈ ರೀತಿ ಸಲ್ಲಿಸಿರುವ ವರದಿಯನ್ನು ಅನುಬಂಧ-11 ರಂತೆ ಲಗತ್ತಿಸಿ ಸಲ್ಲಿಸಲಾಗಿದೆ.

13. ದಿನಾಂಕ:10/9/2009ರಲ್ಲಿ ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಪ್ರಕಟಿಸಿದ್ದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಸಕ್ರಮಾತಿ ಹೊಂದಿದ ದಿನಗೂಲಿ ನೌಕರರಿಗೆ ಸರ್ಕಾರದ ಸ್ಪಷ್ಟೀಕರಣದಂತೆ ಸೇವಾ ಜೇಷ್ಠತೆಯನ್ನು ನೀಡುವುದಾಗಿ ತಿಳಸಿದ ಅಂಶಕ್ಕೆ ಸಂಬಂಧಿಸಿದಂತೆ ಸಕ್ರಮಾತಿ ಹೊಂದಿದ ದಿನಗೂಲಿ ನೌಕರರು ತಮಗೆ 10/08/2006 ರ ಸಕ್ರಮಾತಿ ಆದೇಶದಲ್ಲಿ ಕಾಣಿಸಿರುವಂತೆ ಸಕ್ರಮಾತಿಗೊಳಸಿದ ದಿನಾಂಕಕ್ಕೆ ಅನುಗುಣವಾಗಿ ಸೇವಾಜ್ಯೇಷ್ಠತೆಯನ್ನು ನೀಡಬೇಕೆಂದು ಮಾನ್ಯ ಕರ್ನಾಟಕ ಆಡಳತ ನ್ಯಾಯಮಂಡಳಯ ಮುಂದೆ ಅರ್ಜಿ ಸಲ್ಲಿಸಿದ್ದರು. ಈ ರೀತಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಕರ್ನಾಟಕ ಆಡಳತ ನ್ಯಾಯಮಂಡಳಯು ಸಕ್ರಮಾತಿ ಆದೇಶಗಳಲ್ಲಿ ಸಕ್ರಮಗೊಳಸಿದ ದಿನಾಂಕಕ್ಕೆ ಅನುಗುಣವಾಗಿ ಸೇವಾ ಜೇಷ್ಠತೆಯನ್ನು ನೀಡಬೇಕೆಂದು ಸೂಚಿಸಿದ್ದನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಸರ್ಕಾರದ ದಿನಾಂಕ:13-11-2006 ರ ಸುತ್ತೋಲೆ, ದಿನಾಂಕ:22-4-2008 ರ ಪತ್ರ ಹಾಹೂ ದಿನಾಂಕ:31-12-2010ರಲ್ಲಿಯ ಒಕ್ಕಣೆಗಳ ಹಿನ್ನೆಲೆಯಲ್ಲಿ ಇಲಾಖೆಯಲ್ಲಿ ಸಕ್ರಮಗೊಂಡ ದಿನಗೂಲಿ ನೌಕರರು ಘನ ನ್ಯಾಯಾಲಯಗಳ ಮಧ್ಯಂತರ ತಡೆಯಾಜ್ಞೆಯನ್ವಯ ಮುಂದುವರೆದಿದ್ದು ಅಂತಹವರುಗಳನ್ನು ಸಕ್ರಮಾತಿ ಮಾಡಿರುವುದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 10/04/2006 ರಂದು ನೀಡಿರುವ ತೀರ್ಪಿನಂತೆ ಇರುವುದಿಲ್ಲವೆಂದು ತಿಳಸಿ ಇಲಾಖೆಯಲ್ಲಿ ಸಕ್ರಮಾತಿ ಆದೇಶಗಳನ್ನು ಹೊರಡಿಸಿರುವುದು ಯುಕ್ತ ವಾಗಿರುವುದಿಲ್ಲವೆಂದು ಮಾನ್ಯ ಉಚ್ಚ ನ್ಯಾಯಾಲಯದ ಅವಗಾಹನೆಗೆ ರಿಟ್ ಅರ್ಜಿಯಲ್ಲಿ ಸಲ್ಲಿಸಲಾಗಿರುತ್ತದೆ. ಆದರೆ ಮಾನ್ಯ ಉಚ್ಚ ನ್ಯಾಯಾಲಯವೂ ಸಹ ಮಾನ್ಯ ಕರ್ನಾಟಕ ಆಡಳತ ನ್ಯಾಯ ಮಂಡಳಯು ನೀಡಿರುವ ಆದೇಶವನ್ನು ಪುರಸ್ಕರಿಸಿ ಸರ್ಕಾರವು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಸಿ ಸಕ್ರಮಾತಿಗೊಳಸಿದ ನೌಕರರಿಗೆ ಅವರುಗಳನ್ನು 10 ವರ್ಷಗಳು ಪೂರೈಸಿದ ಮರುದಿನದಿಂದ ಸಕ್ರಮಾತಿ ಮಾಡಿ ನಿಗದಿಪಡಿಸಿರುವ ದಿನಾಂಕಗಳಗನುಗುಣವಾಗಿ ಸೇವಾ ಜೇಷ್ಠತೆಯನ್ನು ನೀಡಬೇಕೆಂದು ತೀರ್ಪು ನಿಡಿರುತ್ತದೆ. ಆ ಸಂದರ್ಭದಲ್ಲಿಯೂ ಸಹ ಮಾನ್ಯ ಉಚ್ಚ ನ್ಯಾಯಾಲಯವು ನ್ಯಾಯಾಲಯಗಳ ತಡೆಯಾಜ್ಞೆಯನುಸಾರ ಇವರು ಸೇವೆಯಲ್ಲಿ ಮುಂದುವರೆದಿರುತ್ತಾರೆಂಬ ಅಂಶಗಳಗೆ ಸಂಬಂಧಿಸಿದಂತೆ ಯಾವುದೇ ಅಭಿಪ್ರಾಯವನ್ನು ನೀಡಿರುವುದಿಲ್ಲ. ಮುಂದುವರೆದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವೂ ಸಹ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದು ಸರ್ಕಾರವು ಸಲ್ಲಿಸಿದ್ದ ವಿಶೇಷ ಅನುಜ್ಞೆ ಅರ್ಜಿಯನ್ನು ವಜಾಗೊಳಸಿರುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ ಸಕ್ರಮಾತಿ ವಿಷಯವು ಅಂತಿಮ ಘಟ್ಟ ತಲುಪಿರುತ್ತದೆ.

14. ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅರ್ಜಿ ಸಂಖ್ಯೆ 22216/2013 ರಡಿ ದಿನಾಂಕ:03-7-2013 ರಂದು ಸಕ್ರಮಾತಿ ಹೊಂದಿದ ದಿನಗೂಲಿ ನೌಕರರಿಗೆ ಸೇವಾ ಜ್ಯೇಷ್ಠತೆ ನೀಡುವ ಕುರಿತು ನೀಡಿದ್ದ ತೀರ್ಪಿನ ಕುರಿತು ನಿರ್ಧಾರ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳತ ಸುಧಾರಣಾ ಇಲಾಖೆಯ ಕಾರ್ಯದರ್ಶಿಗಳ ಹಾಗೂ ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಮತ್ತು ಸರ್ಕಾರಿ ವಕೀಲರೊಡನೆ ಸಭೆ ಏರ್ಪಡಿಸುವ ಸಂಬಂಧ ಇಲಾಖಾವತಿಯಿಂದ ದಿನಾಂಕ:27-4-2013 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಗೆ ಪತ್ರ ಬರೆಯಲಾಗಿರುತ್ತದೆ. ಸದರಿ ಪತ್ರದ ಪ್ರತಿಯನ್ನು ಅನುಬಂಧ-12 ರಂತೆ ಲಗತ್ತಿಸಿದೆ. ಇಲಾಖೆಯು ಎಲ್ಲಾ ಹಂತದಲ್ಲಿಯೂ ಸಹ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಪೂರ್ವದಲ್ಲಿ ಸರ್ಕಾರಕ್ಕೆ ವಿವಿಧ ಘನ ನ್ಯಾಯಾಲಯಗಳು ನೀಡಿರುವ ತೀರ್ಪುಗಳ ಸಂಪೂರ್ಣ ಮಾಹಿತಿಯನ್ನು ಒದಗಿಸಿದ್ದು ಯಾವುದೇ ಹಂತದಲ್ಲಿ ಇಲಾಖೆಯು ಸ್ವಯಂ ಆಗಿ ಯಾವುದೇ ನಿರ್ಧಾರವನ್ನು ಕೈಗೊಂಡಿರುವ ಬಗ್ಗೆ ಇಲಾಖಾ ಕಡತಗಳಲ್ಲಿ ಲಭ್ಯವಿರುವುದಿಲ್ಲ.

15. ಮಾನ್ಯ ಕರ್ನಾಟಕ ಆಡಳತ ನ್ಯಾಯಮಂಡಳ, ಮಾನ್ಯ ಉಚ್ಛ ನ್ಯಾಯಲಯದ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಲಯಗಳು ನೀಡಿರುವ ತೀರ್ಪುಗಳ ಹಿನ್ನೆಲೆಯಲ್ಲಿ ಸಕ್ರಮಾತಿ ಹೊಂದಿದ

ನೌಕರರಿಗೆ ಸೇವಾ ಜ್ಯೇಷ್ಠತೆಯನ್ನು ನೀಡಲಾಗಿರುತ್ತದೆ ಎಂಬ ಅಂಶವನ್ನೂ ಸಹ ಮಾನ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಸವಿಸ್ತಾರವಾಗಿ ಈ ಕಛೇರಿಯ ದಿನಾಂಕ:20-4-2016 ರ ಪತ್ರದಲ್ಲಿ ತಿಳಿಸಿ ಪ್ರಕರಣ ಸಂಖ್ಯೆ:131/2016 ರಲ್ಲಿ ಇರುವ ಅರ್ಜಿದಾರರ ಅರ್ಜಿಯನ್ನು ಮಾನ್ಯ ಮಾಡಬಾರದೆಂದು ಕೋರಲಾಗಿರುತ್ತದೆ. ಸದರಿ ಪತ್ರದ ಪ್ರತಿಯನ್ನು **ಅನುಬಂಧ-13** ರಂತೆ ಲಗತ್ತಿಸಿ ಸಲ್ಲಿಸಿದೆ.

16. ಇಲಾಖೆಯಲ್ಲಿ ದಿನಗೂಲಿಯಿಂದ ಸಕ್ರಮಗೊಂಡ ಶ್ರೀ ಕೆ.ಎ.ನಂಜಯ್ಯ ಇವರು ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ತಮ್ಮನ್ನು ಸಕ್ರಮಾತಿಗೊಳಿಸುವ ಸಂಬಂಧ ನೀಡಿದ್ದ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಆಯೋಗವು ದಿನಾಂಕ:25-02-2013 ರಂದು ಪತ್ರ ಬರೆದು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು **ದಿನಾಂಕ:10-01-2013** ರಲ್ಲಿ ನೀಡಿರುವ ಆದೇಶದಂತೆ ಕ್ರಮಕೈಗೊಂಡು ವರದಿಯನ್ನು ಕಳುಹಿಸಬೇಕೆಂದು ಸೂಚಿಸಿರುತ್ತದೆ. ಪತ್ರದ ಪ್ರತಿಯನ್ನು **ಅನುಬಂಧ-14** ರಂತೆ ಲಗತ್ತಿಸಿ ಸಲ್ಲಿಸಿದೆ.
17. ಮಾನ್ಯ ಸರ್ವೋಚ್ಚ ನ್ಯಾಯಲಯ ದಿನಾಂಕ: 25/11/2013ರಂದು ನೀಡಿರುವ ಅಂತಿಮ ತೀರ್ಪಿನನ್ವಯ ಸಕ್ರಮಾತಿ ಹೊಂದಿದ ನೌಕರರಿಗೆ ಸೇವಾ ಜೇಷ್ಠತೆಯನ್ನು ನೀಡಲಾಗಿರುತ್ತದೆ. ಸೇವಾ ವಿಷಯಗಳಿಗೆ ಸಂಬಂದಿಸಿದಂತೆ ಭಾದಿತರಾದ ನೌಕರರು ಕಾನೂನಿನಡಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಮಾನ್ಯ ಕರ್ನಾಟಕ ನ್ಯಾಯಮಂಡಳಿಯ ಮುಂದೆ ಅರ್ಜಿ ಸಲ್ಲಿಸಿ ಪರಿಹಾರವನ್ನು ಕೋರಬಹುದಾಗಿರುತ್ತದೆ. ಆದರೆ ಶ್ರೀ ಜಿ.ವಿ. ರಾಮು ಮತ್ತು ಇತರರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಆಯೋಗದ ಮುಂದೆ ಅರ್ಜಿ ಸಲ್ಲಿಸಿ ಪರಿಹಾರ ಪಡೆದುಕೊಂಡಿರುವುದು ಎಷ್ಟರ ಮಟ್ಟಿಗೆ ಸರಿಯೆಂಬ ಪ್ರಶ್ನೆ ಉದ್ಭವಿಸುತ್ತದೆ.

ಮಾನ್ಯ ಆಯೋಗದ ನಿರ್ದೇಶನದಂತೆ ಆದೇಶ ತಲುಪಿದ 30 ದಿವಸಗಳೊಳಗಾಗಿ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಮಾನ್ಯ ಆಯೋಗಕ್ಕೆ ಸಲ್ಲಿಸಬೇಕಾಗಿರುತ್ತದೆ. ಮಾನ್ಯ ಆಯೋಗದ ಆದೇಶವು ದಿ: 07-03-2018ರಂದು ಈ ಕಛೇರಿಗೆ ತಲುಪಿರುತ್ತದೆ. ಈ ಪ್ರಕರಣವನ್ನು ಮೇಲ್ಕಂಡ ಕಾರಣಗಳ ಹಿನ್ನೆಲೆಯಲ್ಲಿ, ಕಾನೂನಿನನ್ವಯ ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ. ಆದುದರಿಂದ, ಈ ಪ್ರಕರಣವನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಸಂಬಂಧ ಸರ್ಕಾರದ ನಿರ್ದೇಶನ ಕೋರಿದೆ.

ತಮ್ಮ ವಿಶ್ವಾಸಿ

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ:ಸಿಬ್ಬಂದಿ-3/2ಡಿ/ಸಿಆರ್-06/2014-15

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ,
ಗಾಂಧೀನಗರ, ಬೆಂಗಳೂರು-560 009
ದಿನಾಂಕ : [illegible]-04-2018.

ಇವರಿಗೆ :
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

**ವಿಷಯ:** ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಾಂಕ:01-7-1984 ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ನಂತರ ಶ್ರೀಮತಿ ಉಮಾದೇವಿ ಹಾಗೂ ಇತರರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸಕ್ರಮಾತಿ ಗೊಳಿಸಿರುವ ಆದೇಶವನ್ನು ಹಿಂಪಡೆಯುವ ಸಂಬಂಧ ಮಾನ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ನೀಡಿರುವ ಆದೇಶಕ್ಕೆ ಸಂಬಂಧಿಸಿದಂತೆ ನಿರ್ದೇಶನ ಕೋರುತ್ತಿರುವ ಕುರಿತು.

**ಉಲ್ಲೇಖ:** 1. ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವು ಪ್ರಕರಣ ಸಂಖ್ಯೆ 131/2016 (ಸೇವೆ) ರಡಿ ದಿನಾಂಕ: 02-03-2018 ರಂದು ನೀಡಿರುವ ಆದೇಶ.
2. ಸರ್ಕಾರಕ್ಕೆ ಬರೆದ ಈ ಕಛೇರಿಯ ಸಮ ಸಂಖ್ಯೆ ಪತ್ರದ ದಿನಾಂಕ: 31.3.2018
3.ಮಾನ್ಯ ಆಯೋಗಕ್ಕೆ ಬರೆದ ಈ ಕಛೇರಿಯ ಸಮ ಸಂಖ್ಯೆ ಪತ್ರದ ದಿನಾಂಕ: 06.04.2018.
4. ಮಾನ್ಯ ಆಯೋಗದ ಪತ್ರ ದಿನಾಂಕ: 13.04.2018.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಾಂಕ: 01/07/1984ರ ನಂತರ ದಿನಗೂಲಿ ಆಧಾರದ ಮೇಲೆ ವಿವಿಧ ಆದೇಶಗಳನ್ನು ನೀಡಿ ದ್ವಿತೀಯ ದರ್ಜೆ ಸಹಾಯಕರುಗಳ, ಬೆರಳಚ್ಚುಗಾರರ, ಶೀಘ್ರಲಿಪಿಗಾರರ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಲು ನೇಮಕಾತಿ ಮಾಡಲಾಗಿತ್ತು. ಈ ರೀತಿ ನೇಮಕವಾಗಿದ್ದ ನೌಕರರನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 201 ವಾತೆಸಿ 2000 ಬೆಂಗಳೂರು, ದಿನಾಂಕ: 27.06.2001 ರಂತೆ ಸಕ್ರಮಾತಿ ಮಾಡಲಾಗಿತ್ತು. ಈ ರೀತಿ ಸಕ್ರಮಾತಿ ಹೊಂದಿದ ನೌಕರರುಗಳಿಗೆ ಜೇಷ್ಠತಾಪಟ್ಟಿಗಳಲ್ಲಿ ಸ್ಥಾನ ಕಲ್ಪಿಸಿರುವುದನ್ನು ಹಾಗೂ ಇಲಾಖೆಯಲ್ಲಿ ದಿನಾಂಕ 01/07/1984ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರನ್ನು ಕಾನೂನು ಮತ್ತು ನಿಯಮ ಬಾಹಿರವಾಗಿ ಸಕ್ರಮಗೊಳಿಸಿ, ಪದೋನ್ನತಿ ನೀಡಿರುವುದರಿಂದ ಕಾನೂನು ಮತ್ತು ನಿಯಮಗಳ ಪಾಲನೆ ಮೂಲಕ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿ.ವಿ ರಾಮು ಹಾಗೂ ಇತರರು ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಬೆಂಗಳೂರು ಇಲ್ಲಿ ಪ್ರಕರಣ ಸಂಖ್ಯೆ 131/2016(ಸೇವೆ) ದಾಖಲಿಸುವ ಮೂಲಕ ಪ್ರಶ್ನಿಸಿರುತ್ತಾರೆ. ಮಾನ್ಯ ಕರ್ನಾಟಕ ರಾಜ್ಯ ಅನುಸೂಚಿತ

ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವು ಉಲ್ಲೇಖ (1)ರಂತೆ ದಿನಾಂಕ:02-3-2018 ರ ಆದೇಶದಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ.

1. "ವಾಣಿಜ್ಯ ತೆರಿಗೆಗಳ ಇಲಾಖೆಯು ದಿನಾಂಕ:01-7-1984 ರ ನಂತರ ದಿನಗೂಲಿ ನೌಕರರಾಗಿ ನೇಮಕಗೊಂಡ ನೌಕರರನ್ನು ಸರ್ವೋಚ್ಛ ನ್ಯಾಯಾಲಯವು ಶ್ರೀಮತಿ ಉಮಾದೇವಿ ಮತ್ತು ಇತರರು ಪ್ರಕರಣದಲ್ಲಿ ದಿನಾಂಕ:10-4-2006 ರಂದು ನೀಡಿರುವ ತೀರ್ಪಿಗೆ ಅನುಗುಣವಾಗುವಂತೆ ಮತ್ತು ಕರ್ನಾಟಕ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳಿಗೆ ಹಾಗೂ ಪತ್ರಗಳಿಗೆ ವಿರುದ್ಧವಾಗಿ 189 ದಿನಗೂಲಿ ನೌಕರರನ್ನು ದ್ವಿತೀಯ ದರ್ಜೆ ಸಹಾಯಕರನ್ನಾಗಿ ನೇಮಕ ಮಾಡಿಕೊಂಡು ದಿನಾಂಕ:10-8-2006 ಮತ್ತು ದಿನಾಂಕ:06.01.2007 ರಂದು ಸಕ್ರಮಾತಿ ಮಾಡಿಕೊಂಡಿರುವುದನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯತಕ್ಕದ್ದು.
2. 189 ದ್ವಿತೀಯ ದರ್ಜೆ ಸಹಾಯಕರ ಜ್ಯೇಷ್ಠತಾ ಪಟ್ಟಿ ತಯಾರಿಸುವ ಸಂದರ್ಭದಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಿ ಕಾನೂನಾತ್ಮಕವಾಗಿ ಹಾಗೂ ನಿಯಮಾನುಸಾರ ನೇಮಕಗೊಂಡ ದ್ವಿತೀಯ ದರ್ಜೆ ನೌಕರರಿಗೆ ಸಂಬಂಧಪಟ್ಟಂತೆ ನಿಯಮಾನುಸಾರ ಜ್ಯೇಷ್ಠತಾಪಟ್ಟಿಯನ್ನು ಸರಿಪಡಿಸಿ ಪ್ರಕಟಿಸಬೇಕು.
3. ಕಾನೂನಾತ್ಮಕವಾಗಿ ಹಾಗೂ ನಿಯಮಾನುಸಾರ ನೇಮಕವಾಗಿರುವ ಯಾವುದೇ ದ್ವಿತೀಯ ದರ್ಜೆ ಸಹಾಯಕರಿಗೆ ಅನ್ಯಾಯವಾಗಿದ್ದರೆ ಸರಿಪಡಿಸಬೇಕು ಮತ್ತು ಜ್ಯೇಷ್ಠತಾಪಟ್ಟಿಯನ್ನು ತಯಾರಿಸಿ ಅರ್ಹತಾ ದಿನಾಂಕದಿಂದ ಮುಂಬಡ್ತಿಯನ್ನು ನೀಡಬೇಕು.
4. ದಿನಾಂಕ:01-7-1984 ರ ನಂತರ ಅಕ್ರಮವಾಗಿ ನೇಮಕಗೊಂಡು 189 ದಿನಗೂಲಿ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012 ರ ಅಡಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿದೆ. ನಿರ್ದೇಶನ ತಲುಪಿದ 30 ದಿನಗಳೊಳಗಾಗಿ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಆಯೋಗಕ್ಕೆ ಸಲ್ಲಿಸಲು ಸೂಚಿಸಿದೆ."

ದಿನಾಂಕ: 31.03.2018 ರಂದು ಬರೆದ ಪತ್ರದಲ್ಲಿ ಮೇಲಿನ ಕಂಡಿಕೆ (4)ರಲ್ಲಿ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012 ರ ಅಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿದೆ ಎಂದು ಬರೆಯಲಾಗಿತ್ತು. ಅದನ್ನು "ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿದೆ" ಎಂದು ಓದಿಕೊಳ್ಳಲು ಕೋರಲಾಗಿದೆ.

ಮುಂದುವರೆದು, ಮಾನ್ಯ ಆಯೋಗದ ಆದೇಶವನ್ನು ಅನುಷ್ಠಾನಗೊಳಿಸುವ ಸಂಬಂಧ ಮುಂದಿನ ಕ್ರಮ ಕೈಗೊಳ್ಳಲು ದಿನಾಂಕ:31-03-2018 ರಂದು ನಿರ್ದೇಶನ ಕೋರಿ ಸರ್ಕಾರಕ್ಕೆ ಪತ್ರ ಬರೆದಿದ್ದು ತತ್ಸಂಬಂಧ ಸರ್ಕಾರದಿಂದ ಯಾವುದೇ ನಿರ್ದೇಶನ ಇಲಾಖೆಯಲ್ಲಿ ಇನ್ನೂ ಸ್ವೀಕೃತವಾಗಿರುವುದಿಲ್ಲವಾದ ಕಾರಣ ಸರ್ಕಾರವು ನೀಡುವ ನಿರ್ದೇಶನಕ್ಕನುಗುಣವಾಗಿ ಮಾನ್ಯ ಆಯೋಗದ ಆದೇಶವನ್ನು ಅನುಷ್ಠಾನಗೊಳಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು 3 ತಿಂಗಳ ಕಾಲಾವಕಾಶ ನೀಡಬೇಕೆಂದು ಮಾನ್ಯ ಆಯೋಗವನ್ನು ಕೋರಿ ಉಲ್ಲೇಖ (3) ರಂತೆ ಪತ್ರ ಬರೆಯಲಾಗಿತ್ತು.

ಮಾನ್ಯ ಆಯೋಗವು ಕಾಲಾವಕಾಶವನ್ನು ಕೋರಿ ಬರೆದ ಪತ್ರಕ್ಕೆ ಉತ್ತರವಾಗಿ ದಿನಾಂಕ: 13.04.2018ರ ಉಲ್ಲೇಖಿತ ಪತ್ರದಲ್ಲಿ "ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ದಿನಗೂಲಿಯಿಂದ ಸಕ್ರಮಾತಿಗೊಂಡ 189 ದ್ವಿತೀಯ ದರ್ಜೆ ಸಹಾಯಕರ ಜೊತೆಗೆ ಬೆರಳಚ್ಚುಗಾರರ ಹುದ್ದೆಗಳಲ್ಲಿ 147 ಹಾಗೂ ಶೀಘ್ರಲಿಪಿಗಾರರ ಹುದ್ದೆಗಳಲ್ಲಿ 17 ದಿನಗೂಲಿ ನೌಕರರೂ ಸಹ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಶ್ರೀಮತಿ ಉಮಾದೇವಿ ಹಾಗೂ ಇತರರ ಪ್ರಕರಣದಲ್ಲಿ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಸಕ್ರಮಾತಿ ಹೊಂದಿರುತ್ತಾರೆ" ಎಂಬ ಪತ್ರದಲ್ಲಿನ ಪ್ರಸ್ತಾಪವನ್ನು ಉದಾಹರಿಸುತ್ತಾ ಮಾನ್ಯ ಆಯೋಗದ ಆದೇಶವನ್ನು ಪೂರ್ಣವಾಗಿ ಅರ್ಥೈಸಿಕೊಂಡಿಲ್ಲವೆಂದು ಮತ್ತು ಆದೇಶವನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಅನಗತ್ಯವಾಗಿ ವಿಳಂಬಧೋರಣೆ ತೋರುತ್ತಿರುವಂತೆ

.ಂಡು ಬರುತ್ತಿದೆಯೆಂದು ತಿಳಿಸುತ್ತಾ ಮಾನ್ಯ ಆಯೋಗವು ನೀಡಿರುವ ಆದೇಶಗಳು ಎರಡು ವಿಭಿನ್ನ ವಿಷಯಗಳಿಂದ ಕೂಡಿದ್ದು (ಪ್ರಕರಣ ಸಂಖ್ಯೆ: 78/2012 (ಸೇವೆ)-ಸಕ್ರಮಗೊಂಡ ದಿನಗೂಲಿ ನೌಕರರ ಸೇವಾ ಜೇಷ್ಠತೆಗೆ ಸಂಬಂಧಿಸಿದ್ದು (ಪ್ರಕರಣ ಸಂಖ್ಯೆ: 131/2016 (ಸೇವೆ)-ದಿನಗೂಲಿ ನೌಕರರ ಸಕ್ರಮಾತಿಗೆ ಸಂಬಂಧಿಸಿದ್ದು) ವಿನಾ:ಕಾರಣ ಒಂದಕ್ಕೊಂದು ಸಂಬಂಧ ಕಲ್ಪಿಸುವುದು ಸರಿಯಲ್ಲ. ಆದ್ದರಿಂದ ಈ ಕೂಡಲೇ ಆಯೋಗವು ದಿನಾಂಕ: 02.03.2018ರಂದು ನೀಡಿರುವ ನಿರ್ದೇಶನ / ಆದೇಶವನ್ನು ಪಾಲಿಸಿ ಅನುಪಾಲನಾ ವರದಿಯನ್ನು ಕಳುಹಿಸಿ ಕೊಡಲು ಸೂಚಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಆಯೋಗದ ನಿರ್ದೇಶನದಂತೆ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಮಾನ್ಯ ಆಯೋಗಕ್ಕೆ ಸಲ್ಲಿಸಬೇಕಾಗಿರುವುದರಿಂದ ಈ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಸಂಬಂಧ ಸರ್ಕಾರದ ನಿರ್ದೇಶನವನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ

(signature)

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು
(ಕೇಂದ್ರ ಕಛೇರಿ)-2, ಬೆಂಗಳೂರು